www.prepp.in

Prepp
Your Personal Exams Guide

| A1 | ಅರ್ಹತಾ ಪರೀಕ್ಷೆ – 2025<br>ಪತ್ರಿಕೆ – 1<br>ಒಟ್ಟು ಪ್ರಶ್ನೆಗಳು : 50<br>ಗರಿಷ್ಠ ಅಂಕಗಳು : 100<br>ವಿಷಯ : ಸಾಮಾನ್ಯ ಅಧ್ಯಯನ | ಕ್ರಮ ಸಂಖ್ಯೆ : |
|---|---|---|
| ವರ್ಷನ್ ಕೋಡ್ | ನಿಮ್ಮ ನೋಂದಣಿ ಸಂಖ್ಯೆಯನ್ನು ನಮೂದಿಸಿ | ಪತ್ರಿಕೆ ಸಂಕೇತ GSP21125A |

## ಅಭ್ಯರ್ಥಿಗಳಿಗೆ ಸೂಚನೆಗಳು

**ಮಾಡಿ:**

1. ಕೊಠಡಿ ಮೇಲ್ವಿಚಾರಕರು ಪ್ರಶ್ನೆಪತ್ರಿಕೆಯನ್ನು ನಿಮಗೆ ಬೆ. **9.55** ಕ್ಕೆ ಕೊಡುತ್ತಾರೆ.
2. ನೋಂದಣಿ ಸಂಖ್ಯೆಯನ್ನು ಓ.ಎಂ.ಆರ್. ಉತ್ತರಪತ್ರಿಕೆಯಲ್ಲಿ ಬರೆದು ಅದಕ್ಕೆ ಸಂಬಂಧಿಸಿದ ವೃತ್ತಗಳನ್ನು ಸಂಪೂರ್ಣವಾಗಿ ತುಂಬಿದ್ದೀರೆಂದು ಖಾತ್ರಿಪಡಿಸಿಕೊಳ್ಳತಕ್ಕದ್ದು.
3. ಪ್ರಶ್ನೆಪತ್ರಿಕೆಯ ವರ್ಷನ್ ಕೋಡ್ ಅನ್ನು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಬರೆದು ಅದಕ್ಕೆ ಸಂಬಂಧಿಸಿದ ವೃತ್ತಗಳನ್ನು ಸಂಪೂರ್ಣವಾಗಿ ತುಂಬಬೇಕು.
4. ಪ್ರಶ್ನೆಪತ್ರಿಕೆಯ ವರ್ಷನ್ ಕೋಡ್ ಮತ್ತು ಕ್ರಮಸಂಖ್ಯೆಯನ್ನು ನಾಮಿನಲ್ ರೋಲ್‌ನಲ್ಲಿ ತಪ್ಪಿಲ್ಲದೆ ಬರೆಯಬೇಕು.
5. ಓ.ಎಂ.ಆರ್. ಉತ್ತರ ಪತ್ರಿಕೆಯ ಕೆಳಭಾಗದ ನಿಗದಿತ ಜಾಗದಲ್ಲಿ ಕಡ್ಡಾಯವಾಗಿ ಸಹಿ ಮಾಡಬೇಕು.

**ಮಾಡಬೇಡಿ:**

- ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಮುದ್ರಿತವಾಗಿರುವ **ಟೈಮಿಂಗ್** & **ಮಾರ್ಕನ್ನು** ತಿದ್ದಬಾರದು / ಹಾಳುಮಾಡಬಾರದು / ಅಳಿಸಬಾರದು.

## ಅಭ್ಯರ್ಥಿಗಳಿಗೆ ಪ್ರಮುಖ ಸೂಚನೆಗಳು

1. ಪ್ರಶ್ನೆಗಳಲ್ಲಿ ಬಳಸಿರುವ **signs and symbols** ಗಳನ್ನು, ಬೇರೆ ರೀತಿಯಲ್ಲಿ ಹೇಳದ ಹೊರತು, ನಿಗದಿತ ಪಠ್ಯಪುಸ್ತಕದಲ್ಲಿನ ಅರ್ಥವನ್ನು ಪರಿಗಣಿಸಬೇಕು.
2. ಪ್ರಶ್ನೆಪತ್ರಿಕೆಯಲ್ಲಿ ಒಟ್ಟು **50** ಪ್ರಶ್ನೆಗಳಿದ್ದು, ಪ್ರತಿ ಪ್ರಶ್ನೆಗೂ 4 ಬಹು ಆಯ್ಕೆ ಉತ್ತರಗಳು ಇರುತ್ತವೆ. ಪ್ರತಿ ಪ್ರಶ್ನೆಯ ಕೆಳಗೆ ಕೊಟ್ಟಿರುವ ನಾಲ್ಕು ಬಹು ಆಯ್ಕೆಯ ಉತ್ತರಗಳಲ್ಲಿ ಸರಿಯಾದ ಒಂದು ಉತ್ತರವನ್ನು ಆಯ್ಕೆ ಮಾಡಿ.
3. ಬೆಳಿಗ್ಗೆ **10.00** ಗಂಟೆಗೆ ಪ್ರಶ್ನೆ ಪತ್ರಿಕೆಯ ಬಲಭಾಗದಲ್ಲಿರುವ ಸೀಲ್ ತೆಗೆದು ಈ ಪ್ರಶ್ನೆಪತ್ರಿಕೆಯಲ್ಲಿ ಯಾವುದೇ ಪುಟಗಳು ಮುದ್ರಿತವಾಗಿಲ್ಲದೇ ಇರುವುದು ಕಂಡು ಬಂದಲ್ಲಿ ಅಥವಾ ಹರಿದು ಹೋಗಿದ್ದಲ್ಲಿ ಅಥವಾ ಯಾವುದೇ ಅಕ್ಷರಗಳು ಬಿಟ್ಟುಹೋಗಿದ್ದಲ್ಲಿ ಪರೀಕ್ಷೆ ಪ್ರಾರಂಭವಾದ 5 ನಿಮಿಷಗಳೊಳಗೆ ಪ್ರಶ್ನೆಪತ್ರಿಕೆಯನ್ನು ಬದಲಾಯಿಸಿಕೊಳ್ಳುವುದು. ನಂತರ ಓ.ಎಂ.ಆರ್. ಉತ್ತರಪತ್ರಿಕೆಯಲ್ಲಿ ಉತ್ತರಿಸಲು ಪ್ರಾರಂಭಿಸುವುದು.
4. ಪ್ರಶ್ನೆಪತ್ರಿಕೆಯಲ್ಲಿನ ಪ್ರಶ್ನೆಗೆ ಅನುಗುಣವಾಗಿರುವ ಸರಿ ಉತ್ತರವನ್ನು ಓ.ಎಂ.ಆರ್. ಉತ್ತರಪತ್ರಿಕೆಯಲ್ಲಿ ಅದೇ ಕ್ರಮ ಸಂಖ್ಯೆಯ ಮುಂದೆ ನೀಡಿರುವ ಸಂಬಂಧಿಸಿದ ವೃತ್ತವನ್ನು ನೀಲಿ ಅಥವಾ ಕಪ್ಪು ಬಾಲ್ ಪಾಯಿಂಟ್ ಪೆನ್‌ನಿಂದ ಸಂಪೂರ್ಣ ತುಂಬುವುದು.

| ಸರಿಯಾದ ಕ್ರಮ CORRECT METHOD | | | | ತಪ್ಪು ಕ್ರಮಗಳು WRONG METHODS | | | | | | | | | | | |
|---|---|---|---|---|---|---|---|---|---|---|---|---|---|---|---|
| | | | | ⊗ | ② | ③ | ④ | ① | ② | ③ | ④ | ① | ● | ● | ④ |
| ① | ● | ③ | ④ | ● | ② | ③ | ④ | ① | ● | ③ | ④ | ① | ② | ③ | ④ |

5. ಓ.ಎಂ.ಆರ್. ಉತ್ತರ ಪತ್ರಿಕೆಯನ್ನು ಸ್ಕ್ಯಾನ್ ಮಾಡುವ ಸ್ಕ್ಯಾನರ್ ಬಹಳ ಸೂಕ್ಷ್ಮವಾಗಿದ್ದು ಸಣ್ಣ ಗುರುತನ್ನು ಸಹ ದಾಖಲಿಸುತ್ತದೆ. ಆದ್ದರಿಂದ ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಉತ್ತರಿಸುವಾಗ ಎಚ್ಚರಿಕೆ ವಹಿಸಿ.
6. ಪ್ರಶ್ನೆಪತ್ರಿಕೆಯಲ್ಲಿ ಕೊಟ್ಟಿರುವ ಖಾಲಿ ಜಾಗವನ್ನು ಕಚ್ಚಾ ಕೆಲಸಕ್ಕೆ ಉಪಯೋಗಿಸಿ. ಓ.ಎಂ.ಆರ್. ಉತ್ತರ ಪತ್ರಿಕೆಯನ್ನು ಇದಕ್ಕೆ ಉಪಯೋಗಿಸಬೇಡಿ.
7. **ಮ. 1.00 ಗಂಟೆಗೆ ಕೊನೆಯ ಬೆಲ್ ಆದ ನಂತರ ಉತ್ತರಿಸುವುದನ್ನು ನಿಲ್ಲಿಸಿ, ಓ.ಎಂ.ಆರ್. ಉತ್ತರ ಪತ್ರಿಕೆಯನ್ನು ಕೊಠಡಿ ಮೇಲ್ವಿಚಾರಕರಿಗೆ ಯಥಾಸ್ಥಿತಿಯಲ್ಲಿ ನೀಡಿರಿ.**
8. ಕೊಠಡಿ ಮೇಲ್ವಿಚಾರಕರು ಮೇಲ್ಭಾಗದ ಹಾಳೆಯನ್ನು ಪ್ರತ್ಯೇಕಿಸಿ (ಕಚೇರಿ ಪ್ರತಿ) ತಮ್ಮ ವಶದಲ್ಲಿಟ್ಟುಕೊಂಡು ಹಿಂಬದಿಯ ಯಥಾಪ್ರತಿಯನ್ನು (ಅಭ್ಯರ್ಥಿಯ ಪ್ರತಿ) ಅಭ್ಯರ್ಥಿಗಳಿಗೆ ಕೊಡುತ್ತಾರೆ.
9. ಎಲ್ಲಾ ಪ್ರಶ್ನೆಗಳಿಗೆ ಸಮಾನ ಅಂಕಗಳಿರುತ್ತದೆ.
10. **ಋಣಾತ್ಮಕ ಮೌಲ್ಯಮಾಪನವಿರುವುದಿಲ್ಲ.**
11. ಯಾವುದೇ ರೀತಿಯ ಮೊಬೈಲ್ ಫೋನ್, ಕ್ಯಾಲ್ಕುಲೇಟರ್ ಮತ್ತು ಇತರೆ ರೀತಿಯ ಎಲೆಕ್ಟ್ರಾನಿಕ್/ಕಮ್ಯುನಿಕೇಷನ್ ಸಾಧನಗಳು ಇತ್ಯಾದಿಗಳನ್ನು ಪರೀಕ್ಷಾ ಕೇಂದ್ರದ ಆವರಣದೊಳಗೆ ತರುವುದನ್ನು ನಿಷೇಧಿಸಿದೆ.

**ಸೂಚನೆ: ಪ್ರಶ್ನೆಪತ್ರಿಕೆಯಲ್ಲಿನ ಯಾವುದಾದರೂ ಪ್ರಶ್ನೆಯ ಬಗ್ಗೆ ಸಂದೇಹ ಉಂಟಾದಲ್ಲಿ ಕನ್ನಡ/ಇಂಗ್ಲೀಷ್ ಭಾಗವನ್ನು ನೋಡುವುದು.**

34

www.prepp.in

Prepp
Your Personal Exams Guide

DO NOT WRITE HERE

Prepp Your Personal Exam Guide

www.prepp.in

prepp
Your Personal Exams Guide

| A1 VERSION CODE | ELIGIBILITY EXAMINATION-2025<br>PAPER-1<br>Total Number of Questions : 50<br>Maximum Marks : 100<br>Subject : GENERAL STUDIES | Serial Number : |
|---|---|---|
| | MENTION YOUR REGISTER NUMBER | Paper Code: GSP21125A |

A1

## INSTRUCTIONS FOR CANDIDATES

**DOs:**

1. This question booklet is issued to you at **9.55 AM** by the room invigilator.
2. Check whether the Register Number has been entered and shaded in the respective circles on the OMR answer sheet.
3. The version code of this question booklet should be entered on the OMR answer sheet and the respective circles should also be shaded completely.
4. The Version Code and Serial Number of this question booklet should also be entered on the Nominal Roll without any mistakes.
5. Compulsorily sign at the bottom portion of the OMR answer sheet in the space provided.

**DON'Ts:**

- **THE TIMING AND MARKS PRINTED ON THE OMR ANSWER SHEET SHOULD NOT BE DAMAGED / MUTILATED / SPOILED.**

## IMPORTANT INSTRUCTIONS TO CANDIDATES

1. In case of usage of **signs and symbols** in the questions, the regular textbook connotation should be considered unless stated otherwise.
2. This question booklet contains **50** questions and each question will have one statement and four different options / responses & out of which you have to choose one correct answer.
3. **After 10.00 AM,** remove the paper seal of this question booklet and check that this booklet does not have any unprinted or torn or missing pages or items etc., if so, get it replaced by a complete test booklet within 5 minutes of the commencement of exam. Read each item and start answering on the OMR answer sheet.
4. Completely **darken / shade** the relevant circle with a **blue or black ink ballpoint pen against the question number on the OMR answer sheet.**

| ಸರಿಯಾದ ಕ್ರಮ CORRECT METHOD | | | | ತಪ್ಪು ಕ್ರಮಗಳು WRONG METHODS | | | | | | | | | | | |
|---|---|---|---|---|---|---|---|---|---|---|---|---|---|---|---|
| | | | | ⊗ | ② | ③ | ④ | ① | ② | ③ | ④ | ① | ● | ● | ④ |
| ① | ● | ③ | ④ | ◐ | ② | ③ | ④ | ① | ⦿ | ③ | ④ | ① | ② | ③ | ④ |

5. Please note that even a minute unintended ink dot on the OMR answer sheet will also be recognized and recorded by the scanner. Therefore, avoid multiple markings of any kind on the OMR answer sheet.
6. Use the space provided on each page of the question booklet for rough work. Do not use the OMR answer sheet for the same.
7. **Once the last Bell rings at 1.00 PM**, stop writing on the OMR answer sheet and hand over the **OMR answer sheet** to the room invigilator as it is.
8. After separating the top sheet (Office copy), the invigilator will return the bottom sheet replica (Candidate's copy) to you.
9. All questions carry equal marks.
10. **There will be no negative marking.**
11. Use of Mobile Phones, Calculators and other Electronic/Communication gadgets of any kind is prohibited inside the Examination venue.

**NOTE: In case of any discrepancy in the question paper, please refer English/ Kannada Version.**

Prepp
Your Personal Exams Guide

1. ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ.

| ಪಟ್ಟಿ-I | ಪಟ್ಟಿ-II |
| --- | --- |
| a) ದೃಶ್ಯ ಕಲಿಕಾರ್ಥಿಗಳು | i) ಕೈಯಿಂದ ಮಾಡುವ ಚಟುವಟಿಕೆಗಳಿಗೆ ಆದ್ಯತೆ ನೀಡುವುದು |
| b) ಚಲನಾ ಕ್ರಮದಿಂದ (ಕೈನೆಸ್ಥೆಟಿಕ್) ಕಲಿಕಾರ್ಥಿಗಳು | ii) ರೇಖಾಚಿತ್ರಗಳು ಮತ್ತು ನಕಾಶೆಗಳಿಂದ ಪ್ರಯೋಜನ ಪಡೆಯುವುದು |
| c) ಸಹಪಾಠಿ ಅಧ್ಯಾಪನ | iii) ತರಗತಿಯಲ್ಲಿನ ವೈವಿಧ್ಯತೆಯನ್ನು ತಿಳಿಸುತ್ತದೆ |
| d) ಒಳಗೊಳ್ಳುವಿಕೆ/ಅಂತರ್ಗತ ಶಿಕ್ಷಣ | iv) ವಿದ್ಯಾರ್ಥಿಗಳು ಪರಸ್ಪರರಿಂದ ಕಲಿಯುತ್ತಾರೆ |

ಸಂಕೇತಗಳು :

(1) a – i, b – ii, c – iii, d – iv

(2) a – i, b – iii, c – ii, d – iv

(3) a – iv, b – ii, c – iii, d – i

(4) a – ii, b – i, c – iv, d – iii

2. ಯೋಜನಾ ಆಧಾರಿತ ಮೌಲ್ಯಮಾಪನವನ್ನು ಬಳಸುವುದರ ಪ್ರಯೋಜನಗಳು

(1) ವಾಸ್ತವಾಂಶಗಳನ್ನು ನೆನಪಿನಲ್ಲಿಟ್ಟುಕೊಳ್ಳುವ ಮಹತ್ವ

(2) ವಿಮರ್ಶಾತ್ಮಕ ಚಿಂತನೆಗಳನ್ನು ಮತ್ತು ಸಮಸ್ಯೆ ಪರಿಹಾರ ಕೌಶಲ್ಯಗಳನ್ನು ವರ್ಧಿಸುತ್ತದೆ

(3) ಮೌಲ್ಯಮಾಪನಕ್ಕೆ ವ್ಯಯ ಮಾಡುವ ಸಮಯವನ್ನು ಕಡಿಮೆ ಮಾಡುತ್ತದೆ

(4) ಬಹು ಆಯ್ಕೆಯ ಪರೀಕ್ಷೆಗಳನ್ನು ಅನ್ವಯಿಸುವಲ್ಲಿ ಸುಲಭತೆ

3. ಫ್ಲಿಪ್ಡ್ ತರಗತಿ ಕೊಠಡಿಗಳು ಸಾಮಾನ್ಯವಾಗಿ ಏನನ್ನು ಒಳಗೊಂಡಿರುತ್ತವೆ?

(1) ಶಿಕ್ಷಕರು ಬೋಧನಾ ವೀಡಿಯೋಗಳನ್ನು ರೆಕಾರ್ಡ್ ಮಾಡುತ್ತಾರೆ ಮತ್ತು ಸಮಸ್ಯೆಗಳನ್ನು ಅಭ್ಯಾಸ ಮಾಡಲು ವಿದ್ಯಾರ್ಥಿಗಳೊಂದಿಗೆ ಹಂಚಿಕೊಳ್ಳುತ್ತಾರೆ.

(2) ತರಗತಿಯಲ್ಲಿ ನಿಯೋಜನೆಗಳನ್ನು ಪೂರ್ಣಗೊಳಿಸುವುದು ಮತ್ತು ಮನೆಯಲ್ಲಿ ವೀಡಿಯೋಗಳನ್ನು ನೋಡುವುದು.

(3) ಸಾಂಪ್ರದಾಯಿಕ ಉಪನ್ಯಾಸ-ಆಧಾರಿತ ಬೋಧನೆ.

(4) ಯಾವುದೇ ತರಗತಿ ಚಟುವಟಿಕೆಗಳಿಲ್ಲದೆ ಆನ್‌ಲೈನ್ ಮೌಲ್ಯಮಾಪನ.

---

ಕಚ್ಚಾ ಕೆಲಸಕ್ಕೆ ಸ್ಥಳ

www.prepp.in

1. Match the following:

| List-I | List-II |
| --- | --- |
| a) Visual learners | i) Preference to hands-on activities |
| b) Kinesthetic learners | ii) Benefit from diagrams and charts |
| c) Peer tutoring | iii) Addresses diversity in classroom |
| d) Inclusive education | iv) Students learn from each other |

Codes:

(1) a – i, b – ii, c – iii, d – iv

(2) a – i, b – iii, c – ii, d – iv

(3) a – iv, b – ii, c – iii, d – i

(4) a – ii, b – i, c – iv, d – iii

2. Benefit of using project-based assessment ______

(1) Importance to memorization of facts

(2) Enhances critical thinking and problem-solving skills

(3) Reduces time spent on assessments

(4) Easiness to apply multiple choice tests

3. Flipped classroom typically involves ______

(1) Teacher records instructional videos and shares them with students for practising problems

(2) Completing assignments in the class and watching videos at home

(3) Traditional lecture-based teaching

(4) Online assessment without any classroom activities

SPACE FOR ROUGH WORK

prepp
Your Personal Exams Guide

4. ಗಣಕಯಂತ್ರ ಆಧಾರಿತ ಪರೀಕ್ಷೆಯು (CBT) ಒಳಗೊಂಡಿರುವ ಹಂತಗಳನ್ನು ಅನುಕ್ರಮಗೊಳಿಸಿ.

i) ಪರೀಕ್ಷಾ ಸ್ವರೂಪ ವಿನ್ಯಾಸ

ii) ಪ್ರಶ್ನೆಗಳ ರಚನೆ

iii) ವೇದಿಕೆಗಳು/ತಂತ್ರಜ್ಞಾನವನ್ನು ಆಯ್ಕೆ ಮಾಡುವುದು

iv) ಪರೀಕ್ಷೆಯ ಉದ್ದೇಶಗಳನ್ನು ವ್ಯಾಖ್ಯಾನಿಸುವುದು

**(1) ii, iii, i, iv**

**(2) iv, ii, i, iii**

**(3) iii, i, ii, iv**

**(4) i, iii, iv, ii**

5. ಈ ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ.

| ಪಟ್ಟಿ-I (ಭಾವನೆಗಳು) | ಪಟ್ಟಿ-II (ಚಿಹ್ನೆಗಳು) |
|---|---|
| a) ಕ್ರೋಧ | i) ಪರಚುವುದು, ಕಚ್ಚುವುದು, ಹಾಸಿಗೆಯಲ್ಲಿ ಮೂತ್ರ ವಿಸರ್ಜಿಸುವುದು, ತಿನ್ನಲು ನಿರಾಕರಿಸುವುದು, ಒದೆಯುವುದು |
| b) ಸಂತೋಷ | ii) ಅಸಮಾಧಾನ, ಕಿರಿಕಿರಿ, ಭಯದ ಭಾವನೆ, ದುಃಖ |
| c) ಭಯ | iii) ಲವಲವಿಕೆ ಮತ್ತು ಸೃಜನಶೀಲತೆ, ಕುತೂಹಲ ಮತ್ತು ತೊಡಗಿಸಿಕೊಳ್ಳುವಿಕೆ, ಮುಗುಳ್ನಗೆ ಮತ್ತು ನಗು |
| d) ಅಸೂಯೆ | iv) ನಡುಗುವುದು, ಅಳುವುದು, ಓಡಿಹೋಗುವುದು, ಉಸಿರುಗಟ್ಟುವುದು ಮತ್ತು ಹಿಂದೆ ಸರಿಯುವುದು. |

ಸಂಕೇತಗಳು :

**(1) a – iv, b – ii, c – i, d – iii**

**(2) a – iii, b – iv, c – i, d – ii**

**(3) a – ii, b – iii, c – iv, d – i**

**(4) a – i, b – ii, c – iii, d – iv**

6. ಸಕಾರಾತ್ಮಕವಾದಿ ದೃಷ್ಟಿಕೋನದ ಪ್ರಮುಖ ಲಕ್ಷಣ ಯಾವುದು?

(1) ಗುಣಾತ್ಮಕ ಸಂಶೋಧನಾ ವಿಧಾನಗಳ ಮೇಲೆ ಅವಲಂಬನೆ

(2) ವ್ಯಕ್ತಿನಿಷ್ಠ ವ್ಯಾಖ್ಯಾನಗಳು ಮತ್ತು ವೈಯಕ್ತಿಕ ಅನುಭವಗಳ ಮೇಲೆ ಒತ್ತು

(3) ಅಸ್ತಿತ್ವದಲ್ಲಿರುವ ಉದ್ದೇಶಗಳು, ಮಾಪನ ಮಾಡಬಹುದಾದ ವಸ್ತು ಸ್ಥಿತಿಗಳು ಮತ್ತು ಕಾನೂನುಗಳನ್ನು ನಿರ್ವಹಿಸುವ ವಿದ್ಯಮಾನಗಳಲ್ಲಿ ನಂಬಿಕೆ

(4) ಸಾಂಸ್ಕೃತಿಕ ಸಾಪೇಕ್ಷತಾವಾದದ ಪ್ರಾಮುಖ್ಯತೆಯನ್ನು ಗುರುತಿಸುವುದು

---

ಕಚ್ಚಾ ಕೆಲಸಕ್ಕೆ ಸ್ಥಳ

www.prepp.in

Prepp
Your Personal Exams Guide

4. Rightly sequence the steps involved in Computer Based Testing (CBT).

i) Design test format

ii) Create questions

iii) Choose platform/technology

iv) Define test objectives

(1) ii, iii, i, iv

(2) iv, ii, i, iii

(3) iii, i, ii, iv

(4) i, iii, iv, ii

5. Match the following:

| List-I (Emotions) | List-II (Signs) |
|---|---|
| a) Anger | i) Scratching, biting, bedwetting, refusal to eat, kicking |
| b) Happiness | ii) Resentment, irritation, feeling of fear, grief |
| c) Fear | iii) Playfulness and creativity, curiosity and engagement, smiles and laughter |
| d) Jealousy | iv) Trembling, crying, running away, choking and withdrawal |

Codes:

(1) a – iv, b – ii, c – i, d – iii

(2) a – iii, b – iv, c – i, d – ii

(3) a – ii, b – iii, c – iv, d – i

(4) a – i, b – ii, c – iii, d – iv

6. What is the key characteristic of the positivist approach?

(1) Reliance on qualitative research methods

(2) Emphasis on subjective interpretations and personal experiences

(3) Belief in the existence of objectives, measurable facts and laws governing phenomena

(4) Recognition of the importance of cultural relativism

SPACE FOR ROUGH WORK

www.prepp.in

Prepp
Your Personal Exams Guide

7. ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ ಮತ್ತು ಸರಿಯಾದ ಉತ್ತರವನ್ನು ಆಯ್ಕೆ ಮಾಡಿರಿ.

| ಪಟ್ಟಿ-I | ಪಟ್ಟಿ-II |
|---|---|
| a) ವ್ಯವಸ್ಥಿತ ಮಾದರಿ | i) ಸಮೂಹದ ಪ್ರತಿಯೊಂದು ಗುಂಪಿನಿಂದ ಮಾದರಿಯನ್ನು ಆಯ್ಕೆ ಮಾಡಲಾಗುತ್ತದೆ. |
| b) ಯಾದೃಚ್ಛಿಕ ಮಾದರಿ | ii) ಮಾದರಿಯನ್ನು ರೂಪಿಸಲು ಪ್ರತಿಯೊಂದು ಸ್ತರದಿಂದ ಘಟಕಗಳನ್ನು ಆಯ್ಕೆ ಮಾಡಲಾಗುತ್ತದೆ. |
| c) ಶ್ರೇಣೀಕೃತ ಮಾದರಿ | iii) ನಿಯತಾವಧಿ ಹೊಂದಿರುವ ಬೃಹತ್ ಸಮೂಹದಿಂದ ಮಾದರಿಯನ್ನು ಆಯ್ಕೆ ಮಾಡಲಾಗುತ್ತದೆ. |
| d) ಕ್ಲಸ್ಟರ್ ಮಾದರಿ | iv) ಸಮೂಹದ ಪ್ರತಿಯೊಂದು ಘಟಕಕ್ಕೆ ಆಯ್ಕೆ ಹೊಂದಲು ಸಮಾನ ಅವಕಾಶವನ್ನು ನೀಡಲಾಗುತ್ತದೆ. |

ಸಂಕೇತಗಳು :

(1) a – ii, b – iii, c – iv, d – i

(2) a – iii, b – ii, c – i, d – iv

(3) a – iii, b – iv, c – ii, d – i

(4) a – i, b – ii, c – iii, d – iv

8. ಮಾದರಿಯನ್ನು ಆಯ್ಕೆ ಮಾಡುವಲ್ಲಿ ಸರಿಯಾದ ಅನುಕ್ರಮವನ್ನು ಈ ಕೆಳಗಿನವುಗಳಲ್ಲಿ ಯಾವುದು ಪ್ರತಿನಿಧಿಸುತ್ತದೆ?

i) ಯಥೋಚಿತ ಮಾದರಿಯನ್ನು ಪಡೆಯುವುದು

ii) ಸಮೂಹವನ್ನು ಪಟ್ಟಿಮಾಡುವುದು

iii) ಸಮೂಹವನ್ನು ವ್ಯಾಖ್ಯಾನಿಸುವುದು

iv) ಪ್ರಾತಿನಿಧಿಕ ಮಾದರಿಯನ್ನು ಆಯ್ಕೆ ಮಾಡುವುದು

(1) iii, ii, i, iv
(2) i, ii, iii, iv
(3) ii, i, iv, iii
(4) iii, iv, ii, i

9. ಸಮಾಜ ವಿಜ್ಞಾನ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಈ ಕೆಳಗಿನ ಯಾವ ಸ್ವರೂಪಣಾ ಶೈಲಿಯನ್ನು ಸಾಮಾನ್ಯವಾಗಿ ಬಳಸಲಾಗುತ್ತದೆ?

(1) ಮಾಡರ್ನ್ ಲಾಂಗ್ವೇಜ್ ಅಸೋಸಿಯೇಷನ್

(2) ಚಿಕ್ಯಾಗೊ/ತುರಾಬಿಯನ್

(3) ಅಮೇರಿಕನ್ ಸೈಕಾಲಾಜಿಕಲ್ ಅಸೋಸಿಯೇಷನ್

(4) ಇನ್ಸ್ಟಿಟ್ಯೂಟ್ ಆಫ್ ಎಲೆಕ್ಟ್ರಿಕಲ್ ಆ್ಯಂಡ್ ಎಲೆಕ್ಟ್ರಾನಿಕ್ ಇಂಜಿನಿಯರ್ಸ್

ಕಚ್ಚಾ ಕೆಲಸಕ್ಕೆ ಸ್ಥಳ

www.prepp.in

7. Match the following and choose the correct answer:

| List-I | List-II |
| --- | --- |
| a) Systematic Sampling | i) The sample is selected from each group of the population |
| b) Random Sampling | ii) The units are selected from each strata to constitute a sample |
| c) Stratified Sampling | iii) A sample is selected from a large population with a fixed periodic interval |
| d) Cluster Sampling | iv) Each unit of population is given an equal chance of being selected |

Codes:

(1) a – ii, b – iii, c – iv, d – i
(2) a – iii, b – ii, c – i, d – iv
(3) a – iii, b – iv, c – ii, d – i
(4) a – i, b – ii, c – iii, d – iv

8. Which of the following represents the right sequence of drawing the sample?

i) Obtaining an adequate sample.
ii) Listing the population.
iii) Defining the population.
iv) Selecting a representative sample.

(1) iii, ii, i, iv
(2) i, ii, iii, iv
(3) ii, i, iv, iii
(4) iii, iv, ii, i

9. Which of the following formatting styles is commonly used in the field of Social Science and Education?

(1) Modern Language Association
(2) Chicago/Turabian
(3) American Psychological Association
(4) Institute of Electrical and Electronic Engineers

SPACE FOR ROUGH WORK

www.prepp.in

10. ಒಂದು ಕಂಪನಿಯ ಮಾರಾಟಗಾರನಿಗೆ ಉನ್ನತ ದರ್ಜೆಯ ಕೈಗಡಿಯಾರ ತನ್ನ ಜಾಹೀರಾತು ಮತ್ತು ಮಾರಾಟ ಪ್ರಚಾರದ ಅಭಿಯಾನವನ್ನು ಉನ್ನತ ದರ್ಜೆಯ ಕೈಗಡಿಯಾರಗಳಿಗೆ ವಿನ್ಯಾಸಗೊಳಿಸಲು, ಉನ್ನತ ದರ್ಜೆಯ ಮತ್ತು ಐಷಾರಾಮಿ ಉತ್ಪನ್ನಗಳನ್ನು ಖರೀದಿಸುವ ಜನಸಂಖ್ಯೆಯ ಸಮಗ್ರ ವಿವರದ ಅಗತ್ಯವಿದ್ದರೆ ಯಾವ ರೀತಿಯ ಸಂಶೋಧನಾ ವಿಧಾನವನ್ನು ಬಳಸಲಾಗುತ್ತದೆ?

(1) ಸಂದರ್ಶನ ವಿಧಾನ
(2) ವಿವರಣಾತ್ಮಕ ವಿಧಾನ
(3) ಪ್ರಾಯೋಗಿಕ ವಿಧಾನ
(4) ಅವಲೋಕನ ವಿಧಾನ

★ ಕೆಳಗಿನ ಉದ್ಧೃತ ಭಾಗವನ್ನು ಗಮನವಿಟ್ಟು ಓದಿರಿ ಹಾಗೂ ಪ್ರಶ್ನೆಗಳಿಗೆ (11-15) ಉತ್ತರಿಸಿರಿ.

ಪುಸ್ತಕಗಳು ಜ್ಞಾನದ ಸರ್ವೋತ್ಕೃಷ್ಟ ಭಂಡಾರಗಳಾಗಿವೆ. ಇವು ನಾಗರಿಕತೆಯ ಔನ್ನತ್ಯದತ್ತ ಸಾಗುವ ಮಾನವನ ಪಯಣದಲ್ಲಿಯ ಜೀವಂತ ಉದಾಹರಣೆಗಳಾಗಿವೆ. ಪೂರ್ವದಲ್ಲಿ ಗತಿಸಿದ ಶ್ರೇಷ್ಠ ವ್ಯಕ್ತಿಗಳು ಅವರ ಪುಸ್ತಕಗಳಲ್ಲಿ ಜೀವಂತವಾಗಿರುತ್ತಾರೆ. ನಾವು ಅವರ ಪುಸ್ತಕಗಳನ್ನು ಓದುವಾಗ ಅವರ ವ್ಯಕ್ತಿತ್ವವನ್ನೂ ಮತ್ತು ಅಸ್ತಿತ್ವವನ್ನೂ ಅನುಭವಿಸುತ್ತೇವೆ. ಅವರು ನಮ್ಮೊಂದಿಗೆ ಸಂಭಾಷಿಸುತ್ತಿದ್ದಾರೋ ಎಂಬಂತೆ ಅನುಭವವಾಗುತ್ತದೆ.

ಪುಸ್ತಕಗಳು, ಕೇವಲ ನಾಗರಿಕತೆಯನ್ನು ಸಂಗ್ರಹಿಸುವುದು ಮಾತ್ರವಲ್ಲ ಅದನ್ನು ಮುಂದೆ ಕೊಂಡೊಯ್ಯುತ್ತವೆ. ಮುಂಬರುವ ಪೀಳಿಗೆಗಳು ತಮ್ಮ ಪೂರ್ವಜರು ಬರೆದಿರುವ ಪುಸ್ತಕಗಳಲ್ಲಿ ಜ್ಞಾನದ ಬೆಳಕು ಕಾಣುತ್ತವೆ ಮತ್ತು ಆ ಜ್ಞಾನವನ್ನು ಇನ್ನಷ್ಟು ಉತ್ತಮಗೊಳಿಸಲು ಪ್ರಯತ್ನಿಸುತ್ತವೆ. ಯಾವ ದೇಶದಲ್ಲಿ ಅನೇಕ ಶ್ರೇಷ್ಠ ಪುಸ್ತಕಗಳಿಲ್ಲವೊ ಅಲ್ಲಿನ ನಾಗರಿಕತೆ ಹೆಚ್ಚಿನ ಪ್ರಗತಿ ಸಾಧಿಸಲು ಸಾಧ್ಯವಾಗುವುದಿಲ್ಲ. ಕಲೆ, ವಿಜ್ಞಾನ, ವಾಣಿಜ್ಯ ಮುಂತಾದ ಕ್ಷೇತ್ರಗಳಲ್ಲಿನ ಇತ್ತೀಚಿನ ಜ್ಞಾನವನ್ನು ನಾವು ಪುಸ್ತಕಗಳಿಂದ ಪಡೆಯುತ್ತೇವೆ. ನಾವು ಆಯ್ದುಕೊಂಡ ಕ್ಷೇತ್ರದಲ್ಲಿ ಯಶಸ್ಸು ಸಾಧಿಸಲು ಮತ್ತು ಅದನ್ನು ಸಾಧ್ಯವಾಗಿಸಲು ಈ ಜ್ಞಾನವು ನಮಗೆ ಸಹಾಯಕಾರಿಯಾಗಿದ್ದು, ನಮಗೆ ಶಕ್ತಿ ನೀಡುತ್ತದೆ.

ಪುಸ್ತಕಗಳು ನಮ್ಮನ್ನೆಂದೂ ನಿರಾಶೆಗೊಳಿಸದ ಸ್ನೇಹಿತರಾಗಿವೆ. ನಮ್ಮೆಲ್ಲ ಒಳ್ಳೆಯ ಕಾಲದ ಸ್ನೇಹಿತರು ನಮ್ಮನ್ನು ತೊರೆದಾಗಲೂ ಸಹ ಪುಸ್ತಕಗಳು ನಮ್ಮ ಕೈ ಬಿಡುವುದಿಲ್ಲ . ನಮ್ಮ ಮನಸ್ಸನ್ನು ಕವಿದಿರುವ ಅಂಧಕಾರದ ಕಪ್ಪು ಮೋಡಗಳನ್ನು ಅವು ಚದುರಿಸಿ ನಾವು ಈಗಾಗಲೇ ಸಂತೋಷದಿಂದ ಇದ್ದರೆ ಅವು ನಮ್ಮ ಸಂತೋಷವನ್ನು ಮತ್ತಷ್ಟು ಹೆಚ್ಚಿಸುತ್ತವೆ. ಕಾಲಾಂತರದಲ್ಲಿ ಪವಿತ್ರ ಗ್ರಂಥಗಳು ಮತ್ತಿತರ ಶ್ರೇಷ್ಠ ಕೃತಿಗಳು ಜಗಳಗಳಿಂದ ಹರಿದು ಹಂಚಿಹೋದ ಹಾಗೂ ಘಾಸಿಗೊಂಡ ಮನುಕುಲಕ್ಕೆ ಅನಂತ ಸಾಂತ್ವನ ನೀಡಿವೆ.

ಕೆಲವು ಕೋರ್ಸ್‌ಗಳಿಗೆ ಅಥವಾ ವೃತ್ತಿಗಾಗಿಯೇ ಕೆಲವು ಪುಸ್ತಕಗಳು ಸೂಚಿತವಾಗಿರಬಹುದು. ಆದರೆ, ಅನೇಕ ಪುಸ್ತಕಗಳು ಸಾಮಾನ್ಯ ಅಧ್ಯಯನಕ್ಕಾಗಿ ಇವೆ. ಕಾವ್ಯ, ನಾಟಕ, ಕಾದಂಬರಿ, ಸಣ್ಣಕತೆಗಳು ಮುಂತಾದ ಸಾಹಿತ್ಯ ಪ್ರಕಾರದ ಪುಸ್ತಕಗಳನ್ನು ಉತ್ತಮ ಬರಹಗಾರರೇನಾದರೂ ಬರೆದಿದ್ದರೆ, ಅವು ಸಾಮಾನ್ಯವಾಗಿ ರೋಮಾಂಚನಕಾರಿ ಹಾಗೂ ಸ್ಫೂರ್ತಿದಾಯಕವಾಗಿರುತ್ತವೆ. ದುಃಖಾಂತ್ಯದ, ಹಾಸ್ಯಮಯ ಅಥವಾ ವಿನೋದಮಯ ಪುಸ್ತಕಗಳೂ ಇರಬಹುದು. ಪ್ರಶ್ನೆ ಏನೆಂದರೆ ಅದು ವ್ಯಕ್ತಿಯ ಆಯ್ಕೆಗೆ ಬಿಟ್ಟದ್ದು .

ಪುಸ್ತಕದ ಹುಳುವಾಗಿರದಿದ್ದರೂ ಪುಸ್ತಕ ಪ್ರೇಮಿಯಾಗಿರುವುದು ಅದೃಷ್ಟದ ಲಕ್ಷಣವಾಗಿದೆ. ಜಿಪುಣನೊಬ್ಬ ಧನ ಸಂಗ್ರಹದಲ್ಲಿ ಗಳಿಸುವ ಸಂತೋಷಕ್ಕಿಂತ ಹೆಚ್ಚಿನ ಸಂತೋಷವನ್ನು ಅತೀ ಹೆಚ್ಚು ಓದುವ ವ್ಯಕ್ತಿ ಪುಸ್ತಕ ಓದುವುದರಿಂದ ಪಡೆಯುತ್ತಾನೆ. ಪುಸ್ತಕಗಳನ್ನು ಓದುವುದರಿಂದ ಪಡೆಯುವ ಆನಂದ ಹಾಗೂ ಪುಸ್ತಕಗಳಲ್ಲಿ ಹುದುಗಿರುವ ಜ್ಞಾನ ಮೌಲ್ಯಯುತವಾಗಿದೆ. ಉತ್ತಮವಾದ ಪುಸ್ತಕ ಮನುಷ್ಯನ ಆತ್ಮಸ್ಫೂರ್ತಿಯನ್ನು ಆವಾಹಿಸುತ್ತದೆ; ಓದುಗನ ಆನಂದ ಅವರ್ಣನೀಯ.

ಕಚ್ಚಾ ಕೆಲಸಕ್ಕೆ ಸ್ಥಳ

10. **Which type of research method is employed if a company marketer has to design his advertising and sales promotion campaign for high-end watches that would require a holistic profile of the population which buys high-end and luxury products?**

**(1) Interview method**

**(2) Descriptive method**

**(3) Experimental method**

**(4) Observation method**

★ **Read the following passage carefully and answer the questions (11-15):**

**Books are a great treasure house of knowledge. They are the living examples of man's march on the path to higher and higher civilization. The great men who died long ago live in their books. We feel their very personality and existence when we read their books. We feel as if they were conversing with us.**

**Books not only store civilization, but also carry it forward. All coming generations get the light of knowledge from the books written by their ancestors and try to improve upon that knowledge. Civilization cannot make much headway in a country where there are not many great books. We get through books the latest knowledge in the fields of arts, science, commerce, etc. This knowledge is helpful to us and enables us to achieve success in the field of our choice.**

**Books are never failing friends. They never desert us, not even when all fair-weather friends have deserted us. They dispel the dark clouds of gloom from our minds and increase our happiness if we are already happy. Through the ages, the scriptures and other great books have provided immeasurable solace to the wounded and strife-torn humanity.**

**There may be books prescribed for some course or profession, but then there are books for general study. The books of literature – poetry, drama, novel, short stories, etc., are generally highly thrilling and inspiring, if they are written by a good author. There may be tragic, comical or humorous books. The question is that of an individual's choice.**

**To be a lover of books, though not to be a bookworm, is a sign of good luck. A voracious reader gets much more pleasure from reading books than a miser gets in hoarding money. The knowledge embedded in books is valuable; so is pleasure obtained from reading them. A good book absorbs the whole spirit of man; the reader's pleasure is indescribable.**

SPACE FOR ROUGH WORK

Prepp
Your Personal Exams Guide

11. ನಾಗರಿಕತೆಯ ಪ್ರಗತಿಯಲ್ಲಿ ಪುಸ್ತಕಗಳು ಯಾವ ರೀತಿಯಲ್ಲಿ ನೆರವಾಗುತ್ತವೆ?
    (1) ಹಳೆಯ ಪುಸ್ತಕಗಳನ್ನು ಆಧರಿಸಿ, ಹೊಸ ಜ್ಞಾನ ಪಡೆಯಲಾಗುತ್ತದೆ.
    (2) ಪುಸ್ತಕಗಳು ಅನೇಕ ಸಮಸ್ಯೆಗಳಿಗೆ ಪರಿಹಾರ ಒದಗಿಸುತ್ತವೆ.
    (3) ಪುಸ್ತಕಗಳು ಆನಂದದ ಮೂಲಗಳಾಗಿವೆ.
    (4) ಪುಸ್ತಕಗಳು ಜೀವನೋಪಾಯದ ಸಾಧನಗಳಾಗಿವೆ.

12. ಒಂದು ದೇಶವು ಪ್ರಕಾಶಿಸಿದ ಉತ್ತಮ ಗುಣಮಟ್ಟದ ಪುಸ್ತಕಗಳು ಏನನ್ನು ಸೂಚಿಸುತ್ತವೆ?
    (1) ಅದು ಅಧಿಕ ದರದ ಸಾಕ್ಷರತೆಯನ್ನು ಹೊಂದಿದೆ ಎಂದು
    (2) ಅದು ಪ್ರಗತಿಪರ ನಾಗರಿಕತೆಯನ್ನು ಹೊಂದಿದೆ ಎಂದು
    (3) ಅದು ಕೈಗಾರಿಕೀಕರಣಗೊಂಡ ರಾಷ್ಟ್ರವಲ್ಲವೆಂದು
    (4) ಅದು ಶಿಕ್ಷಿತ ಪೂರ್ವಜರನ್ನು ಹೊಂದಿದೆ ಎಂದು

13. ಉದ್ಧೃತ ಭಾಗದ ಪ್ರಕಾರ ಪುಸ್ತಕಗಳನ್ನು ಯಾವ ಕಾರಣಕ್ಕಾಗಿ 'ಎಂದಿಗೂ ನಿರಾಶೆಗೊಳಿಸದ ಸ್ನೇಹಿತರು' ಎಂದು ಕರೆಯಲಾಗಿದೆ?
    (1) ಪುಸ್ತಕಗಳು ವ್ಯಕ್ತಿಗಳನ್ನು ಕೈ ಬಿಡುವುದಿಲ್ಲ.
    (2) ಪುಸ್ತಕಗಳು ನಿರ್ಜೀವವಾಗಿವೆ.
    (3) ಪುಸ್ತಕಗಳು ಓದುಗನಿಗೆ ಮಾಹಿತಿ ನೀಡುತ್ತವೆ.
    (4) ಇತರರಂತಲ್ಲದೇ ಪುಸ್ತಕಗಳು ಮಾರುಕಟ್ಟೆಯಲ್ಲಿ ಯಾವಾಗಲೂ ಲಭ್ಯವಾಗಿರುತ್ತವೆ.

14. ಕೆಳಗಿನ ಯಾವುದನ್ನು ಅದೃಷ್ಟದ ಲಕ್ಷಣವೆಂದು ವರ್ಣಿಸಲಾಗಿದೆ?
    (1) ಜಿಪುಣನಾಗಿರುವುದು
    (2) ಹೆಚ್ಚು ಹಣವನ್ನು ಹೊಂದಿರುವುದು
    (3) ಸಂಸ್ಕೃತಿಯನ್ನು ಮುನ್ನಡೆಸುವುದು
    (4) ಪುಸ್ತಕಗಳ ಬಗ್ಗೆ ವಿಶೇಷ ಮನೋಭಾವ ಹೊಂದಿರುವುದು

15. ಲೇಖಕನ ದೃಷ್ಟಿಯಲ್ಲಿ ಕೆಳಗಿನವುಗಳಲ್ಲಿ ಯಾವುದು ಪುಸ್ತಕ ಓದುವುದರಿಂದ ಪಡೆಯುವ ಜ್ಞಾನ ಮತ್ತು ಆನಂದದ ವಿವರಣೆಯಾಗಿದೆ?
    a) ನಾವು ಹೆಚ್ಚು ಜ್ಞಾನ ಮತ್ತು ಕಡಿಮೆ ಆನಂದವನ್ನು ಪಡೆಯುತ್ತೇವೆ.
    b) ನಾವು ಹೆಚ್ಚು ಆನಂದ ಮತ್ತು ಕಡಿಮೆ ಜ್ಞಾನ ಪಡೆಯುತ್ತೇವೆ.
    c) ನಾವು ಜ್ಞಾನ ಮತ್ತು ಆನಂದಗಳೆರಡನ್ನೂ ಸಮ ಪ್ರಮಾಣದಲ್ಲಿ ಪಡೆಯುತ್ತೇವೆ.
    (1) (a) ಮಾತ್ರ
    (2) (b) ಮಾತ್ರ
    (3) (a) ಅಥವಾ (b)
    (4) (c) ಮಾತ್ರ

ಕಚ್ಚಾ ಕೆಲಸಕ್ಕೆ ಸ್ಥಳ

Prepp
Your Personal Exams Guide

11. How do books help in the progress of civilization?

(1) Based on the earlier books, new knowledge is obtained

(2) Books provide solutions to many problems

(3) Books are a source of happiness

(4) Books are a means of livelihood

12. What does the high quality of books produced by a country indicate?

(1) It has a high rate of literacy

(2) It has a progressive civilization

(3) It is not an industrialized nation

(4) It has learned ancestors

13. Why are books, according to the passage, called 'never failing friends'?

(1) Books do not betray individuals

(2) Books are inanimate

(3) Books give information to the reader

(4) Books are available in the market anytime unlike others

14. Which of the following has been described as a sign of good luck?

(1) Being a miser

(2) Having a lot of money

(3) Advancing the culture

(4) A passion for books

15. Which of the following is the author's view about the knowledge and pleasure derived from books?

a) We get more of knowledge and less of pleasure.

b) We get more of pleasure and less of knowledge.

c) We get knowledge and pleasure in equal measure.

(1) Only (a)

(2) Only (b)

(3) Either (a) or (b)

(4) Only (c)

SPACE FOR ROUGH WORK

16. ಕೆಳಗಿನವುಗಳಲ್ಲಿ ಯಾವ ಪದವು ಇಬ್ಬರು ವ್ಯಕ್ತಿಗಳ ನಡುವೆ ಸಂದೇಶ ಕಳುಹಿಸುವ ಮತ್ತು ಸ್ವೀಕರಿಸುವ ಸಂವಹನವನ್ನು ವಿವರಿಸುತ್ತದೆ?

(1) ಡಿಕೋಡಿಂಗ್

(2) ಎನ್‌ಕೋಡಿಂಗ್

(3) ಟ್ರ್ಯಾನ್ಸಾಕ್ಷನ್

(4) ಡೈಯಾಡಿಕ್

17. ಕೆಳಗಿನ ಯಾವುವು ಸಂವಹನದ ಸಾಮಾನ್ಯ ವರ್ಗೀಕರಣವಾಗಿವೆ?

a) ದೃಶ್ಯಶಾಸ್ತ್ರ (ಆಪ್ಟಿಕ್ಸ್)

b) ಜ್ಞಾನಮೀಮಾಂಸೆ (ಎಪಿಸ್ಟೆಮಿಕ್ಸ್)

c) ಆಂಗಿಕಭಾಷೆ (ಕೈನೆಸಿಕ್ಸ್)

d) ಧ್ವನಿಶಾಸ್ತ್ರ (ವೋಕಲಿಕ್ಸ್)

e) ಸ್ಪರ್ಶ ಸಂವೇದನೆ (ಹ್ಯಾಪ್ಟಿಕ್ಸ್)

ಕೆಳಗೆ ನೀಡಲಾಗಿರುವ ಆಯ್ಕೆಗಳಿಂದ ಸರಿಯಾದ ಉತ್ತರ ಆರಿಸಿ.

(1) a, b ಮತ್ತು c ಮಾತ್ರ

(2) b, c ಮತ್ತು d ಮಾತ್ರ

(3) c, d ಮತ್ತು e ಮಾತ್ರ

(4) b, d ಮತ್ತು e ಮಾತ್ರ

18. ಸಂವಹನದಲ್ಲಿ ಕೆಳಗಿನವುಗಳಲ್ಲಿ ಯಾವುದು 'ಸಾನಿಧ್ಯ ಶಾಸ್ತ್ರ' (ಪ್ರಾಕ್ಸಿಮಿಕ್ಸ್ ) ಕ್ಷೇತ್ರಕ್ಕೆ ಸಂಬಂಧಿಸಿದೆ?

a) ಮುಖದ ಅಭಿವ್ಯಕ್ತಿಗಳು

b) ಜನಸಂದಣಿ (ಕ್ರೌಡಿಂಗ್)

c) ಪ್ರಾದೇಶಿಕತೆ

d) ವೈಯಕ್ತಿಕ ವಲಯ

e) ದೃಷ್ಟಿ ಸಂಪರ್ಕ (ಐ ಕಾಂಟ್ಯಾಕ್ಟ್)

ಕೆಳಗೆ ನೀಡಲಾಗಿರುವ ಆಯ್ಕೆಗಳಿಂದ ಸರಿಯಾದ ಉತ್ತರ ಆರಿಸಿ.

(1) a, b ಮತ್ತು c ಮಾತ್ರ

(2) b, c ಮತ್ತು d ಮಾತ್ರ

(3) c, d ಮತ್ತು e ಮಾತ್ರ

(4) a, d ಮತ್ತು e ಮಾತ್ರ

ಕಚ್ಚಾ ಕೆಲಸಕ್ಕೆ ಸ್ಥಳ

Prepp
Your Personal Exams Guide

16. Which of the following terms describes the communication between two people that involves sending and receiving of messages?

(1) Decoding

(2) Encoding

(3) Transaction

(4) Dyadic

17. Which of the following are the common classifications of communication?

a) Optics

b) Epistemics

c) Kinesics

d) Vocalics

e) Haptics

Choose the correct answer from the options given below:

(1) a, b and c only

(2) b, c and d only

(3) c, d and e only

(4) b, d and e only

18. Which of the following belong to the field of 'proxemics' in communication?

a) Facial expressions

b) Crowding

c) Territoriality

d) Personal space

e) Eye contact

Choose the correct answer from the options given below:

(1) a, b and c only

(2) b, c and d only

(3) c, d and e only

(4) a, d and e only

SPACE FOR ROUGH WORK

Prepp
Your Personal Exams Guide

19. ಒಂದು ತರಗತಿಯಲ್ಲಿ ಪರಿಣಾಮಕಾರಿ ಸಂವಹನಕ್ಕೆ ಪ್ರಸ್ತುತವಾಗಿರುವ ತಂತ್ರಗಳು ಯಾವುವು?

a) ವಿದ್ಯಾರ್ಥಿಗಳ ಸಾಂಸ್ಕೃತಿಕ ಹಿನ್ನೆಲೆಯನ್ನು ಅರ್ಥಮಾಡಿಕೊಳ್ಳುವುದು

b) ಮಾತಿನಲ್ಲಿ ಸ್ಪಷ್ಟತೆ

c) ಶಿಕ್ಷಕ ಮತ್ತು ವಿದ್ಯಾರ್ಥಿಗಳಿಬ್ಬರೂ ಗಮನವಿಟ್ಟು ಕೇಳುವುದು

d) ಸಾಂಸ್ಕೃತಿಕ ಗುರುತುಗಳನ್ನು ಕಂಡುಹಿಡಿಯುವುದು

e) ಸಾಮೂಹಿಕ ಪ್ರಯತ್ನಗಳ ತಿರಸ್ಕಾರ

ಕೆಳಗೆ ನೀಡಲಾಗಿರುವ ಆಯ್ಕೆಗಳಿಂದ ಸರಿಯಾದ ಉತ್ತರ ಆರಿಸಿ.

(1) a, b ಮತ್ತು c ಮಾತ್ರ

(2) b, c ಮತ್ತು d ಮಾತ್ರ

(3) c, d ಮತ್ತು e ಮಾತ್ರ

(4) d, e ಮತ್ತು a ಮಾತ್ರ

20. ಹೊಂದಿಸಿ ಬರೆಯಿರಿ.

| ಪಟ್ಟಿ-I (ಸಂವಹನದಲ್ಲಿ ಪಾಲ್ಗೊಂಡಿರುವ ಕೇಳುಗರ ವಿಧಗಳು) | ಪಟ್ಟಿ-II (ಲಕ್ಷಣಗಳು) |
|---|---|
| a) ಕೇಳುಗನಲ್ಲದವ | i) ಒಬ್ಬನಿಗೆ ಅಗತ್ಯವಿರುವುದಕ್ಕಿಂತ ಇತರ ಮಾಹಿತಿಯಲ್ಲಿ ತೊಡಗಿಕೊಂಡಿರುವವ |
| b) ಅಂಚಿನ ಕೇಳುಗ | ii) ಸಂವಹನದ ಸಂದರ್ಭದಲ್ಲಿ ಪ್ರಾಮುಖ್ಯತೆ ಅರಿಯದೆ ಮಾಹಿತಿಯನ್ನು ಸ್ವೀಕರಿಸುವವ |
| c) ಮೌಲ್ಯಮಾಪನಾತ್ಮಕ ಕೇಳುಗ | iii) ಮಾಹಿತಿಯ ಪರಿಣಾಮಗಳನ್ನು ಅರ್ಥ ಮಾಡಿಕೊಳ್ಳಲು ಅದರ ಪ್ರಸ್ತುತತೆಯನ್ನು ಗಮನಿಸುವುದು |
| d) ಸಕ್ರಿಯ ಕೇಳುಗ | iv) ಸಂವಹನ ಮಾಡಿದ ಮಾಹಿತಿಯ ಬಗ್ಗೆ ಕೆಲವೊಮ್ಮೆ ಮಾತ್ರ ಗಮನ ಹರಿಸುವವ |

ಸಂಕೇತಗಳು :

(1) a – iv, b – iii, c – ii, d – i

(2) a – ii, b – iv, c – i, d – iii

(3) a – ii, b – i, c – iii, d – iv

(4) a – i, b – iv, c – ii, d – iii

ಕಚ್ಚಾ ಕೆಲಸಕ್ಕೆ ಸ್ಥಳ

www.prepp.in

Prepp
Your Personal Exams Guide

19. What are the relevant strategies of effective communication in a classroom?

a) Understanding the cultural background of students.

b) Clarity in speech.

c) Focused listening on both sides – teacher and students

d) Inventing cultural labels.

e) Disdain for collective efforts.

Choose the correct answer from the options given below:

(1) a, b and c only

(2) b, c and d only

(3) c, d and e only

(4) d, e and a only

20. Match the following:

| List – I (Types of listener involved in Communication) | List – II (Characteristics) |
|---|---|
| a) Non-Listener | i) is engaged in information other than the one needed |
| b) Marginal Listener | ii) receives information without processing the significance in the context of communication |
| c) Evaluative Listener | iii) looks into the relevance of the information for understanding its implication |
| d) Active Listener | iv) Pays heed to the communicated information occasionally |

Codes:

(1) a – iv, b – iii, c – ii, d – i

(2) a – ii, b – iv, c – i, d – iii

(3) a – ii, b – i, c – iii, d – iv

(4) a – i, b – iv, c – ii, d – iii

SPACE FOR ROUGH WORK

www.prepp.in
Prepp
Your Personal Exams Guide

21. ಕೆಳಗಿನ ಸರಣಿಯಲ್ಲಿ ಮುಂದೆ ಏನು ಬರುತ್ತದೆ?

**ZBIJ WDKL TGMN QKOP ________**

(1) NPQR (2) MOQR

(3) OPQR (4) NOQR

22. ಒಂದು ನಿರ್ದಿಷ್ಟ ಭಾಷೆಯಲ್ಲಿ COFFEE ಯನ್ನು 3156655 ಎಂದು ಬರೆದರೆ, ಅದೇ ಭಾಷೆಯಲ್ಲಿ TEA ಯನ್ನು ಹೇಗೆ ಬರೆಯಲಾಗುತ್ತದೆ?

(1) 2041 (2) 1951

(3) 2051 (4) 1940

23. ಒಂದು ಕಾರು 6 ಗಂಟೆಗಳಲ್ಲಿ 50 ಕಿ.ಮೀ./ಗಂ. ವೇಗದಲ್ಲಿ ಒಂದು ನಿರ್ದಿಷ್ಟ ದೂರವನ್ನು ಕ್ರಮಿಸುತ್ತದೆ. 4 ಗಂಟೆಗಳಲ್ಲಿ ಅದೇ ದೂರವನ್ನು ಕ್ರಮಿಸಲು, ಅದು ಯಾವ ವೇಗದಲ್ಲಿ ಕ್ರಮಿಸ ಬೇಕಾಗುತ್ತದೆ?

(1) 60 ಕಿ.ಮೀ/ಗಂ. (2) 80 ಕಿ.ಮೀ/ಗಂ.

(3) 70 ಕಿ.ಮೀ/ಗಂ. (4) 75 ಕಿ.ಮೀ/ಗಂ.

24. ನಾಲ್ಕು ವರ್ಷಗಳಲ್ಲಿ ಒಂದು ಮೊತ್ತವು ಚಕ್ರಬಡ್ಡಿದರದಲ್ಲಿ ತಾನಾಗಿಯೇ ದ್ವಿಗುಣಗೊಂಡರೆ, ಈ ಕೆಳಗಿನವುಗಳಲ್ಲಿ ಯಾವುದು ಸರಿಯಾಗಿದೆ?

a) ಆ ಮೊತ್ತವು ತಾನಾಗಿಯೇ 4 ಪಟ್ಟು ಹೆಚ್ಚಾಗಲು 8 ವರ್ಷಗಳನ್ನು ತೆಗೆದುಕೊಳ್ಳುತ್ತದೆ.

b) ಆ ಮೊತ್ತವು ತಾನಾಗಿಯೇ 8 ಪಟ್ಟು ಹೆಚ್ಚಾಗಲು 12 ವರ್ಷಗಳನ್ನು ತೆಗೆದುಕೊಳ್ಳುತ್ತದೆ.

c) ಆ ಮೊತ್ತವು ತಾನಾಗಿಯೇ 16 ಪಟ್ಟು ಹೆಚ್ಚಾಗಲು 16 ವರ್ಷಗಳನ್ನು ತೆಗೆದುಕೊಳ್ಳುತ್ತದೆ.

d) ಆ ಮೊತ್ತವು ತಾನಾಗಿಯೇ 32 ಪಟ್ಟು ಹೆಚ್ಚಾಗಲು 20 ವರ್ಷಗಳು ಬೇಕಾಗುತ್ತದೆ.

(1) (a), (b), (c) ಮತ್ತು (d)

(2) (a), (b) ಮತ್ತು (c) ಮಾತ್ರ

(3) (a), (c) ಮತ್ತು (d) ಮಾತ್ರ

(4) (a), (b) ಮತ್ತು (d) ಮಾತ್ರ

25. ಒಂದು ಗ್ರಂಥಾಲಯವು ಭಾನುವಾರಗಳಂದು ಸರಾಸರಿ 400 ಸಂದರ್ಶಕರನ್ನು ಮತ್ತು ಬೇರೆ ದಿನಗಳಂದು 100 ಸಂದರ್ಶಕರನ್ನು ಹೊಂದಿದೆ. ಶನಿವಾರದಿಂದ ಪ್ರಾರಂಭವಾಗುವ 30 ದಿನಗಳಿರುವ ಒಂದು ತಿಂಗಳಿನಲ್ಲಿ ದಿನವೊಂದರ ಸರಾಸರಿ ಸಂದರ್ಶಕರ ಸಂಖ್ಯೆ______

(1) 100 (2) 150

(3) 200 (4) 250

26. ಒಂದು ನಿರ್ದಿಷ್ಟ ಸಾಂಕೇತಿಕ ಭಾಷೆಯಲ್ಲಿ 'THREAT' ನ್ನು 'RHTTAE' ಎಂದು ಬರೆಯಲಾಗಿದೆ. 'PEARLY' ನ್ನು ಅದೇ ಸಂಕೇತದಲ್ಲಿ ಹೇಗೆ ಬರೆಯಬಹುದು?

(1) YLRAEP (2) YLRPAE

(3) AEPYLR (4) AEPRYL

---

ಕಚ್ಚಾ ಕೆಲಸಕ್ಕೆ ಸ್ಥಳ

www.prepp.in

Prepp
Your Personal Exams Guide

21. What comes next in the following series?

ZBIJ WDKL TGMN QKOP ________

(1) NPQR (2) MOQR

(3) OPQR (4) NOQR

22. In a certain language, if COFFEE is written as 3156655, then how will TEA be written in the same language?

(1) 2041 (2) 1951

(3) 2051 (4) 1940

23. A car covers a certain distance at a speed of 50 kmph in 6 hours. To cover the same distance in 4 hours, it must travel at a speed of

(1) 60 kmph (2) 80 kmph

(3) 70 kmph (4) 75 kmph

24. If an amount doubles itself at compound interest in 4 years, then which of the following are correct?

a) It takes 8 years to make the amount 4 times of itself

b) It takes 12 years to make the amount 8 times of itself

c) It takes 16 years to make the amount 16 times of itself

d) It takes 20 years to make the amount 32 times of itself

(1) (a), (b), (c) and (d) (2) (a), (b) and (c) only

(3) (a), (c) and (d) only (4) (a), (b) and (d) only

25. A library has an average of 400 visitors on Sundays and 100 visitors on other days. The average number of visitors per day in a month of 30 days beginning with a Saturday is

(1) 100 (2) 150

(3) 200 (4) 250

26. If in a certain code language 'THREAT' is written as 'RHTTAE', then how will 'PEARLY' be written in that code?


(1) YLRAEP (2) YLRPAE

(3) AEPYLR (4) AEPRYL

SPACE FOR ROUGH WORK

Prepp
Your Personal Exams Guide

27. ತ್ರಿಭುಜವು ವೈದ್ಯರನ್ನು, ವೃತ್ತವು ಆಟಗಾರರನ್ನು ಮತ್ತು ಆಯತವು ಕಲಾವಿದರನ್ನು ಪ್ರತಿನಿಧಿಸುತ್ತದೆ.




ಹಾಗಾದರೆ ಯಾವ ಸಂಖ್ಯೆಯು ಆಟಗಾರರೂ ಅಲ್ಲದ, ವೈದ್ಯರೂ ಅಲ್ಲದ ಕಲಾವಿದರನ್ನು ಪ್ರತಿನಿಧಿಸುತ್ತದೆ?

(1) 1
(2) 2
(3) 3
(4) 4

28. ಕೆಳಗಿನ ಪ್ರಶ್ನೆಯನ್ನು ಉತ್ತರಿಸಲು ಕೆಳಗೆ ನೀಡಿರುವ ಮಾಹಿತಿಯನ್ನು ಪರಿಗಣಿಸಿ.

(A) A, B, C, D, E, F ಮತ್ತು G ಎಂಬ ಏಳು ವಿದ್ಯಾರ್ಥಿಗಳು ಸರಣಿ ಪರೀಕ್ಷೆಗಳನ್ನು ತೆಗೆದುಕೊಳ್ಳುತ್ತಾರೆ.

(B) ಯಾವುದೇ ಇಬ್ಬರು ವಿದ್ಯಾರ್ಥಿಗಳು ಒಂದೇ ರೀತಿಯ ಅಂಕಗಳನ್ನು ಪಡೆದಿಲ್ಲ .

(C) G ಯು ಯಾವಾಗಲೂ A ಗಿಂತ ಹೆಚ್ಚು ಅಂಕ ಗಳಿಸುತ್ತಾನೆ.

(D) A ಯು ಯಾವಾಗಲೂ B ಗಿಂತ ಹೆಚ್ಚು ಅಂಕ ಗಳಿಸುತ್ತಾನೆ.

(E) ಪ್ರತಿ ಬಾರಿಯೂ C ಅತ್ಯಂತ ಹೆಚ್ಚು ಅಂಕ ಗಳಿಸುತ್ತಾನೆ ಮತ್ತು E ಯು ಅತ್ಯಂತ ಕಡಿಮೆ ಅಂಕ ಗಳಿಸುತ್ತಾನೆ ಅಥವಾ ಪರ್ಯಾಯವಾಗಿ D ಯು ಅತ್ಯಂತ ಹೆಚ್ಚು ಅಂಕ ಗಳಿಸುತ್ತಾನೆ ಮತ್ತು F ಅಥವಾ B ಯು ಅತ್ಯಂತ ಕಡಿಮೆ ಅಂಕ ಗಳಿಸುತ್ತಾರೆ.

ಒಂದು ವೇಳೆ G ಯು ಐದನೇ ರ‍್ಯಾಂಕ್ ಪಡೆದರೆ, ಈ ಕೆಳಗಿನವುಗಳಲ್ಲಿ ಯಾವುದು ಸರಿ?

(1) D ಯು ಅತ್ಯಂತ ಹೆಚ್ಚು ಅಂಕ ಗಳಿಸುತ್ತಾನೆ

(2) C ಯು ಎರಡನೇ ರ‍್ಯಾಂಕ್ ಪಡೆದಿದ್ದಾನೆ

(3) E ಯು ಮೂರನೇ ರ‍್ಯಾಂಕ್ ಪಡೆದಿದ್ದಾನೆ


(4) B ಯು ನಾಲ್ಕನೇ ರ‍್ಯಾಂಕ್ ಪಡೆದಿದ್ದಾನೆ

---

ಕಚ್ಚಾ ಕೆಲಸಕ್ಕೆ ಸ್ಥಳ

Prepp
Your Personal Exams Guide

27. The triangle represents doctors, the circle represents players and the rectangle represents artists.




Then which number represents artists who are neither players nor doctors?

(1) 1 (2) 2

(3) 3 (4) 4

28. Refer to the following information to answer the question that follows:

(A) Seven students A, B, C, D, E, F and G take a series of tests.

(B) No two students get similar marks.

(C) G always scores more than A.

(D) A always scores more than B.

(E) Each time either C scores the highest and E gets the least, or alternatively D scores the highest and F or B scores the least.

If G is ranked fifth, then which of the following must be true?

(1) D scores the highest

(2) C is ranked second

(3) E is ranked third

(4) B is ranked fourth

SPACE FOR ROUGH WORK

www.prepp.in

Prepp
Your Personal Exams Guide

29. ಒಬ್ಬ ಪೋಲೀಸನು 20 ಕಿ.ಮೀ ಪೂರ್ವಕ್ಕೆ ಹೋಗುತ್ತಾನೆ ಮತ್ತು ದಕ್ಷಿಣಕ್ಕೆ ತಿರುಗಿ 30 ಕಿ.ಮೀ. ಸಾಗುತ್ತಾನೆ. ತದನಂತರ ಪುನಃ ತನ್ನ ಎಡಕ್ಕೆ ತಿರುಗಿ 10 ಕಿ.ಮೀ. ಸಾಗುತ್ತಾನೆ. ಅವನು ಪ್ರಾರಂಭದ ಬಿಂದುವಿನಿಂದ ಎಷ್ಟು ದೂರದಲ್ಲಿ ಇದ್ದಾನೆ?


(1) $30\sqrt{2}$ ಕಿ.ಮೀ.

(2) 20 ಕಿ.ಮೀ.


(3) 10 ಕಿ.ಮೀ.

(4) 40 ಕಿ.ಮೀ.

30. ಸಮಸ್ಯಾ ರೇಖಾಚಿತ್ರಗಳು ಈ ಕೆಳಗಿನಂತಿವೆ:



ಉತ್ತರದ ರೇಖಾಚಿತ್ರಗಳು ಈ ಕೆಳಗಿನಂತಿವೆ :



(a) (b) (c) (d)

ಹಾಗಾದರೆ ಸಮಸ್ಯಾ ಚಿತ್ರದಿಂದ ನಿರ್ಧಾರವಾಗುವ ಸರಣಿಯನ್ನು ಮುಂದುವರಿಸುವ ಸರಿಯಾದ ಉತ್ತರ ರೇಖಾಚಿತ್ರವು

(1) (a)

(2) (b)

(3) (c)

(4) (d)

ಕಚ್ಚಾ ಕೆಲಸಕ್ಕೆ ಸ್ಥಳ

Prepp
Your Personal Exams Guide

29. A policeman goes 20 kms east and then turning to the south he goes 30 kms and then again turns to his left and goes 10 kms. How far is he from the starting point?


(1) $30\sqrt{2}$ kms

(2) 20 kms


(3) 10 kms

(4) 40 kms

30. The problem figures are:



Answer figures are:



(a) (b) (c) (d)

Then the correct answer figure which will continue the series as established by the problem figures is

(1) (a)

(2) (b)


(3) (c)

(4) (d)


SPACE FOR ROUGH WORK

www.prepp.in
Prepp Your Personal Exams Guide

31. ಕೆಳಗಿನ ಪೈ ಚಾರ್ಟ್ ಮತ್ತು ಸ್ತಂಭ (ಬಾರ್) ರೇಖಾಚಿತ್ರ ಅಧ್ಯಯನ ಮಾಡಿ ಮತ್ತು ಕೆಳಗಿನ ಪ್ರಶ್ನೆಗೆ ಉತ್ತರಿಸಿ.




ಆರು ಶಾಲೆಯಲ್ಲಿರುವ 6000 ವಿದ್ಯಾರ್ಥಿಗಳ ಶೇಕಡಾವಾರು ಹಂಚಿಕೆ




ಪ್ರತಿ ಸ್ತಂಭದ ಮೇಲ್ಭಾಗದಲ್ಲಿ ಪ್ರತಿ ಶಾಲೆಯಲ್ಲಿರುವ ಹುಡುಗರ ಸಂಖ್ಯೆಯನ್ನು ತೋರಿಸಲಾಗಿದೆ.

C ಶಾಲೆಯಲ್ಲಿನ ಹುಡುಗರ ಸಂಖ್ಯೆ, B ಶಾಲೆಯಲ್ಲಿನ ಹುಡುಗಿಯರ ಸಂಖ್ಯೆ ಮತ್ತು E ಶಾಲೆಯಲ್ಲಿನ ಒಟ್ಟು ವಿದ್ಯಾರ್ಥಿಗಳ ಸಂಖ್ಯೆಗಳ ಅನುಪಾತ ಎಷ್ಟು?

(1) 45 : 7 : 97

(2) 43 : 9 : 90

(3) 45 : 7 : 87

(4) 43 : 9 : 88

32. ಕೆಳಗಿನ ಕೋಷ್ಟಕವು ಆರು ವಿಭಿನ್ನ ತಿಂಗಳುಗಳಲ್ಲಿ A ಮತ್ತು B ಎಂಬ ಎರಡು ಪಟ್ಟಣಗಳಲ್ಲಿ ಮಾರಾಟವಾದ ಉತ್ಪನ್ನ ವಸ್ತುಗಳ ಸಂಖ್ಯೆಯನ್ನು ನೀಡುತ್ತದೆ.

| ತಿಂಗಳು | ಜನವರಿ | ಫೆಬ್ರವರಿ | ಮಾರ್ಚ್ | ಏಪ್ರಿಲ್ | ಮೇ | ಜೂನ್ |
|---|---|---|---|---|---|---|
| ಪಟ್ಟಣ A | 120 | 140 | 180 | 150 | 180 | 240 |
| ಪಟ್ಟಣ B | 220 | 120 | 150 | 210 | 230 | 180 |


ಏಪ್ರಿಲ್‌ನಲ್ಲಿ ಪಟ್ಟಣ B ನಲ್ಲಿ ಮಾರಾಟವಾದ ವಸ್ತುಗಳು, ಅದೇ ತಿಂಗಳಿನಲ್ಲಿ ಪಟ್ಟಣ A ನಲ್ಲಿ ಮಾರಾಟವಾದ ವಸ್ತುಗಳಿಗಿಂತ ಶೇಕಡಾ ಎಷ್ಟು ಹೆಚ್ಚಾಗಿರುತ್ತದೆ?

(1) 43% (2) 40%


(3) 45% (4) 42%

ಕಚ್ಚಾ ಕೆಲಸಕ್ಕೆ ಸ್ಥಳ

31. Study the following pie-chart and bar diagrams and answer the question below:




**Percentage-wise distribution of students in 6 schools for 6000 students**




Number of boys in each school shown on top of each bar

What is the ratio of the number of boys in School C, the number of girls in School B and the total number of students in School E?

(1) 45 : 7 : 97

(2) 43 : 9 : 90

(3) 45 : 7 : 87

(4) 43 : 9 : 88

32. The following table gives the number of items of a product sold in two Towns A and B in six different months:

| Month | January | February | March | April | May | June |
|---|---|---|---|---|---|---|
| Town A | 120 | 140 | 180 | 150 | 180 | 240 |
| Town B | 220 | 120 | 150 | 210 | 230 | 180 |

The number of items sold in Town B in April is what percent more than the number of products sold in Town A in the same month?

(1) 43%

(2) 40%

(3) 45%

(4) 42%

SPACE FOR ROUGH WORK

Prepp
Your Personal Exams Guide

33. ಆರು ವಿದ್ಯಾರ್ಥಿಗಳು, ಅವರು ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ 1, 2, 3, 4, 5, 6 ರಂತೆ ಏರಿಕೆಯ ಕ್ರಮದಲ್ಲಿ ರ್‍ಯಾಂಕ್ ಪಡೆದಿದ್ದಾರೆ. ಪ್ರತಿ ವಿದ್ಯಾರ್ಥಿಯ ಅಂಕಗಳಿಗೆ 2 ಕೃಪಾಂಕಗಳನ್ನು ಸೇರಿಸಿದರೆ, ಈ ಕೆಳಗಿನವುಗಳಲ್ಲಿ ಯಾವುದು ಸರಿಯಾಗಿದೆ?

(1) ಪ್ರತಿ ವಿದ್ಯಾರ್ಥಿಯ ರ್‍ಯಾಂಕ್‌ನ್ನು 2 ರಿಂದ ಕೂಡಲಾಗಿದೆ.

(2) ಪ್ರತಿ ವಿದ್ಯಾರ್ಥಿಯ ರ್‍ಯಾಂಕ್ ಹಾಗೇ ಇರುತ್ತದೆ.


(3) ಪ್ರತಿ ವಿದ್ಯಾರ್ಥಿಯ ರ್‍ಯಾಂಕ್ ಮೂಲ ರ್‍ಯಾಂಕ್‌ಗಿಂತ ಕಡಿಮೆಯಾಗುತ್ತದೆ.

(4) ಪ್ರತಿ ವಿದ್ಯಾರ್ಥಿಯ ರ್‍ಯಾಂಕ್ ಬದಲಾಗುತ್ತದೆ.

34. ನಿರ್ದಿಷ್ಟ ರೀತಿಯ ನೋವಿನಿಂದ ಬಳಲುತ್ತಿರುವ 500 ರೋಗಿಗಳ ಒಂದು ಸಮೀಕ್ಷೆಯನ್ನು ಮಾಡಲಾಗಿದೆ ಎಂದು ಭಾವಿಸೋಣ. ಅಧ್ಯಯನದ ಉದ್ದೇಶವು ಅಂಥ ಎಲ್ಲಾ ರೋಗಿಗಳಲ್ಲಿ, ನೋವಿಗಾಗಿ ಎರಡು ಔಷಧಿಗಳ ಬಳಕೆಯನ್ನು ತಿಳಿಯುವುದಾಗಿದೆ. ಈ ಕೆಳಗಿನ ಮಾಹಿತಿಯನ್ನು ಪಡೆಯಲಾಗಿದೆ: 500 ರೋಗಿಗಳಲ್ಲಿ, 60% ಮಹಿಳೆಯರಿದ್ದಾರೆ ಮತ್ತು ಇವರಲ್ಲಿ 45% ಮಂದಿ ಔಷಧಿ-1 ಉಪಯೋಗಿಸುತ್ತಾರೆ. ಆದಾಗ್ಯೂ ಒಟ್ಟು ರೋಗಿಗಳಲ್ಲಿ 50% ಮಂದಿ ಔಷಧಿ-1ನ್ನು ಉಪಯೋಗಿಸುತ್ತಾರೆ. ಶೇಕಡಾ ಎಷ್ಟು ಪುರುಷರು ಮತ್ತು ಮಹಿಳೆಯರು ಕ್ರಮವಾಗಿ ಔಷಧಿ-1ನ್ನು ಉಪಯೋಗಿಸುತ್ತಾರೆ?

(1) 23%, 27%
(2) 27%, 33%
(3) 24%, 32%
(4) 33%, 24%

35. ಕೆಳಗಿನ ಗ್ರಾಫ್ ಒಂದು ವರ್ಷದಲ್ಲಿ ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳ ಸಂಖ್ಯೆ ಮತ್ತು ಉತ್ತೀರ್ಣರಾದ ವಿದ್ಯಾರ್ಥಿಗಳ ಸಂಖ್ಯೆಯನ್ನು ಪ್ರತಿನಿಧಿಸುತ್ತದೆ.




ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳಲ್ಲಿ, ಪರೀಕ್ಷೆಯಲ್ಲಿ ಉತ್ತೀರ್ಣವಾಗಿರುವ ವಿದ್ಯಾರ್ಥಿಗಳ ಶೇಕಡಾ ಸರಾಸರಿ ಎಷ್ಟು?

(1) 50%
(2) 57%
(3) 66%
(4) 60%

ಕಚ್ಚಾ ಕೆಲಸಕ್ಕೆ ಸ್ಥಳ

Prepp
Your Personal Exams Guide

33. Six students are ranked in the increasing order as 1, 2, 3, 4, 5, 6 based on their scores in a test. Suppose score of each student is added by grace marks 2, then which of the following IS True?

(1) Rank of each student added by 2

(2) Rank of each student remains same


(3) Rank of each student decreased by original rank

(4) Rank of each student changes

34. Suppose a survey has been conducted on a sample of 500 patients suffering from a particular type of pain. The objective of the study is to know the usage of two medicines for the pain among all such patients. The following information has been obtained: out of 500 patients, 60% are females and of these 45% use Medicine–1. However, out of all patients, 50% use Medicine–1. What percent of male and female use Medicine–1 respectively?

(1) 23%, 27%
(2) 27%, 33%
(3) 24%, 32%
(4) 33%, 24%

35. The following graph represents the number of students appeared and number of students passed in an examination during a year.




Average percentage of students passed over the students appeared is

(1) 50%
(2) 57%
(3) 66%
(4) 60%

SPACE FOR ROUGH WORK

Prepp
Your Personal Exams Guide

36. ಹೊಂದಿಸಿ ಬರೆಯಿರಿ.

| ಪಟ್ಟಿ-I | ಪಟ್ಟಿ-II |
|---|---|
| a) ರೌಟರ್ (Router) | i) ಕಂಪ್ಯೂಟರ್ ಬಳಕೆದಾರರಿಗೆ ಮೌಸ್ ಬಳಸಿ ಆಯ್ಕೆ ಮಾಡಬಹುದಾದ ಐಕಾನ್‌ಗಳನ್ನು ಒದಗಿಸುವ ಇಂಟರ್‌ಫೇಸ್ |
| b) ಫೈರ್‌ವಾಲ್ (Firewall) | ii) ಕಂಪ್ಯೂಟರ್ ನೆಟ್‌ವರ್ಕ್‌ಗಳ ನಡುವೆ ಡೇಟಾ ಪ್ಯಾಕೇಟ್‌ಗಳನ್ನು ಕಳಿಸುವ ಉಪಕರಣ |
| c) ಜಿಯುಐ (GUI) | iii) ವೆಬ್‌ಸೈಟ್‌ಗಳನ್ನು ಪ್ರವೇಶಿಸಲು ಇರುವ ಒಂದು ಅಪ್ಲಿಕೇಶನ್ |
| d) ಬ್ರೌಸರ್ (Browser) | iv) ಅನಧಿಕೃತವಾಗಿ ನೆಟ್‌ವರ್ಕ್‌ನ್ನು ಪ್ರವೇಶಿಸುವುದನ್ನು ತಡೆಗಟ್ಟುವ ಒಂದು ಉಪಕರಣ |

ಸಂಕೇತಗಳು :

(1) a – ii, b – iv, c – i, d – iii

(2) a – ii, b – iii, c – iv, d – i

(3) a – iii, b – iv, c – i, d – ii

(4) a – iv, b – iii, c – ii, d – i

37. ಇ-ಮೇಲ್‌ನಲ್ಲಿ CC ಮತ್ತು BCC ಬಗ್ಗೆ ಕೆಳಗಿನ ಯಾವ ಹೇಳಿಕೆಗಳು ಸರಿಯಾಗಿವೆ?

i) CC ಸ್ವೀಕರಿಸಿದವರು ಉತ್ತರಿಸಲು ಸಾಧ್ಯವಿಲ್ಲ

ii) CC ಸ್ವೀಕರಿಸಿದವರು ಇತರ CC ಮತ್ತು BCC ವಿಳಾಸಗಳನ್ನು ನೋಡಬಹುದು

iii) BCC ಯನ್ನು ನಾಮಮಾತ್ರ (ಕ್ಯಾಶುಯಲ್) ಇ-ಮೇಲ್‌ಗಾಗಿ ಬಳಸಲಾಗುತ್ತದೆ

iv) BCC ಪಡೆದವರು ಇತರೆ ಎಲ್ಲಾ ಸ್ವೀಕರಿಸಿದವರಿಂದ ಮರೆಮಾಡಲ್ಪಟ್ಟಿರುತ್ತಾರೆ

(1) (i) ಮತ್ತು (iii) ಸರಿಯಾಗಿವೆ

(2) (ii) ಮತ್ತು (iii) ಸರಿಯಾಗಿವೆ

(3) (ii) ಮತ್ತು (iv) ಸರಿಯಾಗಿವೆ

(4) (i), (ii) ಮತ್ತು (iv) ಸರಿಯಾಗಿವೆ

ಕಚ್ಚಾ ಕೆಲಸಕ್ಕೆ ಸ್ಥಳ

www.prepp.in

Prepp
Your Personal Exams Guide

36. Match the following and choose the correct option:

| List – I | List – II |
|---|---|
| a) Router | i) An interface for computer users that provides icons to select with a mouse |
| b) Firewall | ii) A device that forwards data packets between computer networks |
| c) GUI | iii) An application for accessing websites |
| d) Browser | iv) A device that prevents unauthorized access to a network |

Codes:

(1) a – ii, b – iv, c – i, d – iii

(2) a – ii, b – iii, c – iv, d – i

(3) a – iii, b – iv, c – i, d – ii

(4) a – iv, b – iii, c – ii, d – i

37. Which of the following statements are true about CC and BCC fields in an e-mail?

i) CC recipients cannot reply.

ii) CC recipients can see other CC and BCC addresses.

iii) BCC is used for casual e-mails.

iv) BCC recipients are hidden from all other recipients.

(1) (i) and (iii) are true

(2) (ii) and (iii) are true

(3) (ii) and (iv) are true

(4) (i), (ii) and (iv) are true

SPACE FOR ROUGH WORK

www.prepp.in

38. ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

S1: ಹೈಪರ್‌ಪಠ್ಯ (Hypertext) ಎನ್ನುವುದು ಇತರ ಪಠ್ಯಗಳಿಗೆ ಲಿಂಕ್‌ಗಳನ್ನು ಒಳಗೊಂಡಿರುವ ಪಠ್ಯವಾಗಿದೆ.

S2: www ಹೈಪರ್‌ಟೆಕ್ಸ್ಟ್ ಆಧಾರಿತವಾಗಿದೆ, ಇದು ಬಳಕೆದಾರರಿಗೆ, ಹೈಪರ್‌ಲಿಂಕ್‌ಗಳನ್ನು ಕ್ಲಿಕ್ ಮಾಡುವ ಮೂಲಕ ವೆಬ್‌ಪೇಜ್‌ಗಳ ನಡುವೆ ನಿರ್ದೇಶಿಸಲು (ನೇವಿಗೇಟ್) ಮಾಡಲು ಅನುಮತಿಸುತ್ತದೆ.

ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

(1) S1 ಮಾತ್ರ ಸರಿಯಿದೆ

(2) S2 ಮಾತ್ರ ಸರಿಯಿದೆ

(3) S1 ಮತ್ತು S2 ಎರಡೂ ಸರಿಯಾಗಿವೆ

(4) S1 ಮತ್ತು S2 ಎರಡೂ ತಪ್ಪಾಗಿವೆ

39. ವಿದ್ಯಾರ್ಥಿಗಳ ಕಲಿಕೆಯನ್ನು ಉತ್ತಮಗೊಳಿಸಲು ಐಸಿಟಿ (ICT)ಯ ಉತ್ತಮ ಬಳಕೆ ಯಾವುದು?

(1) ಪ್ರೊಜೆಕ್ಟರ್‌ನಲ್ಲಿ ಟಿಪ್ಪಣಿಗಳನ್ನು ತೋರಿಸುವುದು

(2) ಗೃಹಕಾರ್ಯವನ್ನು ಇ-ಮೇಲ್ ಮೂಲಕ ಕಳುಹಿಸುವುದು

(3) ಪ್ರತಿ ವಿದ್ಯಾರ್ಥಿಯು ತನ್ನ ಮಟ್ಟಕ್ಕೆ ತಕ್ಕಂತೆ ಕಲಿಕೆಗೆ ಸಹಾಯ ಮಾಡುವ, ಕಲಿಕೆಯ ಆ್ಯಪ್‌ಗಳನ್ನು ಬಳಸುವುದು

(4) ಪಠ್ಯಪುಸ್ತಕದ ಬದಲಿಗೆ ಇ-ಪುಸ್ತಕಗಳಿಂದ ಓದುವುದು

40. ಗೂಗಲ್ ಫಾರ್ಮ್‌ಗಳ ಯಾವ ವಿಶಿಷ್ಟ ಲಕ್ಷಣವು ಅದನ್ನು ಸಮೀಕ್ಷೆಗಳಿಗೆ ಸೂಕ್ತವಾಗಿಸುತ್ತದೆ?

(1) IP ವಿಳಾಸದ ಆಧಾರದ ಮೇಲೆ ಪ್ರತಿಕ್ರಿಯೆ ನಿರ್ಬಂಧಿಸುವ ಸಾಮರ್ಥ್ಯ

(2) ಬಹು ಆಯ್ಕೆ, ಚೆಕ್‌ಬಾಕ್ಸ್ ಪ್ರಕಾರಗಳ ಪ್ರಶ್ನೆಗಳನ್ನು ಬೆಂಬಲಿಸುವುದು

(3) ಸ್ವಯಂಚಾಲಿತವಾಗಿ ಪ್ರತಿಕ್ರಿಯೆಗಳಲ್ಲಿ ಕೃತಿಚೌರ್ಯವನ್ನು (Plagiarism ) ಪತ್ತೆ ಹಚ್ಚುವಿಕೆ

(4) ಪ್ರತಿಕ್ರಿಯೆದಾರರೊಂದಿಗೆ ವೀಡಿಯೋ ಸಂವಾದ ನಡೆಸಲು ಬೆಂಬಲ ನೀಡುವುದು

41. ಜೈವ ವೈದ್ಯಕೀಯ ತ್ಯಾಜ್ಯ ನಿರ್ವಹಣಾ ನಿಯಮಗಳು, 2016 ಪ್ರಕಾರ ಗಾಜಿನ ಸಾಮಾನುಗಳು ಮತ್ತು ದೇಹದಲ್ಲಿ ಸೇರಿಸುವ ಲೋಹದ ಸಾಮಗ್ರಿಗಳನ್ನು______ ರಲ್ಲಿ ಸಂಗ್ರಹಿಸಬೇಕು.

(1) ನೀಲಿ ಬಣ್ಣದ ಗುರುತುಗಳಿರುವ ಕಾರ್ಡ್‌ಬೋರ್ಡ್ ಪೆಟ್ಟಿಗೆಗಳಲ್ಲಿ

(2) ಹಳದಿ ಬಣ್ಣದ ಡಬ್ಬಗಳಲ್ಲಿ

(3) ಚುಚ್ಚಲಾಗದ, ಸೋರಿಕೆಯಾಗದ, ವಿರೂಪಗೊಳಿಸಲಾಗದ ಬಿಳಿ ಡಬ್ಬಗಳಲ್ಲಿ

(4) ಆಟೋಕ್ಲೇವ್ ಸುರಕ್ಷಿತ-ಪ್ಲಾಸ್ಟಿಕ್ ಚೀಲಗಳು ಅಥವಾ ಡಬ್ಬಗಳಲ್ಲಿ

ಕಚ್ಚಾ ಕೆಲಸಕ್ಕೆ ಸ್ಥಳ

www.prepp.in

Prepp
Your Personal Exams Guide

38. **Consider the following statements:**

**S1: Hypertext is a text that contains links to other texts.**

**S2: www is based on hypertext, which allows users to navigate between webpages by clicking on hyperlinks.**

**Select the correct answer:**

**(1) Only S1 is correct**

**(2) Only S2 is correct**

**(3) Both S1 and S2 are correct**

**(4) Both S1 and S2 are incorrect**

39. **Which of the following is the best use of ICT to improve student learning?**

**(1) Showing notes on projector**

**(2) Sending homework by e-mail**

**(3) Using learning apps that help each student learn at their own level**

**(4) Reading from an e-book instead of a textbook**

40. **Which feature of Google forms makes it suitable for surveys?**

**(1) Ability to restrict responses based on IP address**

**(2) Support for questions like multiple choice, checkboxes**

**(3) Automatic plagiarism detection in responses**

**(4) Support for video conferencing with respondents**

41. **As per the Bio-Medical Waste Management Rules, 2016, glassware and metallic body implants are to be collected in ______**

**(1) Cardboard boxes with blue-coloured marking**

**(2) Yellow-coloured containers**

**(3) Puncture-proof, leak-proof, tamper-proof white containers**

**(4) Autoclave-safe plastic bags or containers**

---

**SPACE FOR ROUGH WORK**

www.prepp.in

Prepp
Your Personal Exams Guide

42. ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:

a) ವಿಪತ್ತು ನಿರ್ವಹಣಾ ಕಾಯ್ದೆಯನ್ನು ಸಂಸತ್ತು 2005ರಲ್ಲಿ ಅಂಗೀಕರಿಸಿತು.

b) ಕೇಂದ್ರ ಗೃಹಮಂತ್ರಿಯವರು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದ (NDMA) ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಾರೆ.

c) ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರವು (NDMA) ಉಪಾಧ್ಯಕ್ಷರನ್ನು ಸೇರಿದಂತೆ 9 ಕ್ಕಿಂತ ಹೆಚ್ಚಿನ ಸಂಖ್ಯೆಯ ಸದಸ್ಯರನ್ನು ಹೊಂದಿರಬಾರದು.

d) ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದ (NDMA) ಸದಸ್ಯರ ಅವಧಿ 5 ವರ್ಷಗಳಿರುತ್ತದೆ.

ಮೇಲಿನ ಯಾವ ಹೇಳಿಕೆಗಳು ಸರಿಯಾಗಿವೆ?

(1) a, b ಮತ್ತು c
(2) a, c ಮತ್ತು d
(3) b, c ಮತ್ತು d
(4) a, b, c ಮತ್ತು d

43. ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿಯ ಗುರಿ (SDG) 10 ಯಾವುದಕ್ಕೆ ಸಂಬಂಧಿಸಿದೆ?

(1) ಶೂನ್ಯ ಹಸಿವು
(2) ಅಸಮಾನತೆ ಕಡಿಮೆಗೊಳಿಸುವುದು
(3) ಹವಾಮಾನ ಕ್ರಮ
(4) ಗೌರವಯುತ ಉದ್ಯೋಗ ಮತ್ತು ಆರ್ಥಿಕ ಬೆಳವಣಿಗೆ

44. ಅರ್ಥ್ ಅವರ್ (Earth Hour)ಗೆ ಸಂಬಂಧಿಸಿದ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿರಿ.

a) ಇದೊಂದು ಹವಾಮಾನ ಬದಲಾವಣೆ ಮತ್ತು ಪರಿಸರ ಸಂರಕ್ಷಣೆಗೆ ಸಂಬಂಧಿಸಿದ ಜಾಗೃತಿ ಕಾರ್ಯಕ್ರಮ/ ಆಂದೋಲನವಾಗಿದೆ.

b) ಇದನ್ನು ವಿಶ್ವಸಂಸ್ಥೆಯ ಪರಿಸರ ಕಾರ್ಯಕ್ರಮ (UNEP) ಜಾರಿಗೆ ತಂದಿತು

c) ಇದನ್ನು 2007ರಲ್ಲಿ ಆಸ್ಟ್ರೇಲಿಯಾದಲ್ಲಿ ಜಾರಿಗೆ ತರಲಾಯಿತು.

d) ಅನಗತ್ಯ ದೀಪಗಳನ್ನು 1 ಗಂಟೆ ಸ್ವಯಂ ಪ್ರೇರಿತವಾಗಿ ಆರಿಸುವುದು ಈ ಆಂದೋಲನದ ಭಾಗವಾಗಿದೆ.

ಈ ಮೇಲಿನವುಗಳಲ್ಲಿ ಎಷ್ಟು ಹೇಳಿಕೆ/ಹೇಳಿಕೆಗಳು ಸರಿಯಾಗಿದೆ/ವೆ?

(1) ಮೇಲಿನ ಎಲ್ಲವೂ ಸರಿಯಾಗಿವೆ
(2) ಅವುಗಳಲ್ಲಿ ಮೂರು ಮಾತ್ರ ಸರಿಯಾಗಿವೆ
(3) ಅವುಗಳಲ್ಲಿ ಎರಡು ಮಾತ್ರ ಸರಿಯಾಗಿವೆ
(4) ಕೇವಲ ಒಂದು ಮಾತ್ರ ಸರಿಯಾಗಿದೆ

ಕಚ್ಚಾ ಕೆಲಸಕ್ಕೆ ಸ್ಥಳ

Prepp
Your Personal Exams Guide

**42. Consider the following statements:**

**a) The Disaster Management Act was passed by the Parliament in 2005.**

**b) The Union Home Minister acts as a Chairperson of the National Disaster Management Authority (NDMA)**

**c) The NDMA may have not more than nine members including Vice-Chairman**

**d) The tenure of the members of NDMA shall be five years.**

**Which of the statements given above are correct?**

**(1) a, b and c** **(2) a, c and d**

**(3) b, c and d** **(4) a, b, c and d**

**43. According to the United Nations, Sustainable Development Goal (SDG) 10 is related to**

**(1) Zero Hunger** **(2) Reduced Inequalities**

**(3) Climate Action** **(4) Decent Work and Economic Growth**

**44. Consider the following statements related to Earth Hour:**

**a) It is a climate change and environmental conservation related awareness program/movement.**

**b) It was launched by United Nations Environment Program (UNEP)**

**c) It was launched in 2007 in Australia.**

**d) Voluntary switch off of non-essential lights for 1 hour is a part of this movement.**

**How many of the above statement(s) is/are correct?**

**(1) All of them are correct**

**(2) Only three of them are correct**

**(3) Only two of them are correct**

**(4) Only one is correct**

---

**SPACE FOR ROUGH WORK**

Prepp
Your Personal Exams Guide

45. ಅಂತಾರಾಷ್ಟ್ರೀಯ ಸೌರ ಒಕ್ಕೂಟ (ISA)ಕ್ಕೆ ಸಂಬಂಧಿಸಿದ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

a) ISA ಇದು ಜಾಗತಿಕ ಅಂತರ್‌ಸರ್ಕಾರಿ ಸಂಸ್ಥೆಯಾಗಿದ್ದು, ಇಂಗಾಲ ತಟಸ್ಥ ಭವಿಷ್ಯಕ್ಕಾಗಿ ಸೌರಶಕ್ತಿಯ ಅಳವಡಿಕೆಯನ್ನು ಉತ್ತೇಜಿಸಲು ಸಮರ್ಪಿಸಲಾಗಿದೆ.

b) ಇದು ಭಾರತ ಮತ್ತು ಜರ್ಮನಿಗಳ ಮಧ್ಯದ ಸಹಯೋಗದ ಉಪಕ್ರಮವಾಗಿದೆ.

c) ISAಯ ಕೇಂದ್ರ ಕಛೇರಿ ಜರ್ಮನಿಯ ಬಾನ್‌ನಲ್ಲಿದೆ.

d) ಎಲ್ಲಾ SAARC ರಾಷ್ಟ್ರಗಳು ISAಯ ಸದಸ್ಯ ರಾಷ್ಟ್ರಗಳಾಗಿವೆ.

ಮೇಲಿನ ಹೇಳಿಕೆಗಳಲ್ಲಿ ಯಾವುದು/ವು ಸರಿಯಾಗಿದೆ/ವೆ?

(1) ಮೇಲಿನ ಎಲ್ಲವೂ
(2) a, b ಮತ್ತು d ಮಾತ್ರ
(3) a ಮತ್ತು b ಮಾತ್ರ
(4) a ಮಾತ್ರ

46. ಕೆಳಗಿನವುಗಳಲ್ಲಿ ಯಾವುದು ಬೌದ್ಧ-ಶಿಕ್ಷಣದ ಲಕ್ಷಣವಲ್ಲ ?

(1) ಎಲ್ಲರಿಗೂ ಮುಕ್ತವಾದ ಶಿಕ್ಷಣ
(2) ದೈಹಿಕ ದಂಡನೆ
(3) ಸಾಂಸ್ಥಿಕ ಶಿಕ್ಷಣ
(4) ಉಪಸಂಪದ ಸಮಾರಂಭ

47. ಕೆಳಗಿನವುಗಳನ್ನು ಹೊಂದಿಸಿರಿ:

| ಪಟ್ಟಿ - I (ಸ್ವಾತಂತ್ರ್ಯೋತ್ತರ ಕಾಲದ ಶಿಕ್ಷಣ ಆಯೋಗ ನೀತಿ) | ಪಟ್ಟಿ - II (ವರ್ಷ) |
|---|---|
| a) ವಿಶ್ವವಿದ್ಯಾಲಯ ಶಿಕ್ಷಣ ಆಯೋಗ | i) 1952 – 53 |
| b) ಪ್ರೌಢ ಶಿಕ್ಷಣ ಆಯೋಗ | ii) 1964 – 66 |
| c) ಭಾರತೀಯ ಶಿಕ್ಷಣ ಆಯೋಗ | iii) 1948 – 49 |
| d) ಪ್ರಥಮ ರಾಷ್ಟ್ರೀಯ ಶಿಕ್ಷಣ ನೀತಿ | iv) 1968 |

ಸಂಕೇತಗಳು :

(1) a – iv, b – ii, c – i, d – iii
(2) a – ii, b – i, c – iv, d – iii
(3) a – iv, b – iii, c – ii, d – i
(4) a – iii, b – i, c – ii, d – iv

ಕಚ್ಚಾ ಕೆಲಸಕ್ಕೆ ಸ್ಥಳ

45. Consider the following statements related to International Solar Alliance (ISA).

a) ISA is a global intergovernmental organization dedicated to advancing solar power adoption for a carbon-neutral future.

b) It is a collaborative initiative between India and Germany.

c) The headquarters of ISA is in Bonn, Germany.

d) All the SAARC countries are the members of ISA also.

Which of the above statement(s) is/are correct?

(1) All of them

(2) a, b and d only

(3) a and b only

(4) a only

46. Which one of the following is not the feature of Buddhist education?

(1) Education open to all

(2) Physical punishment

(3) Institutionalized education

(4) Upasampada ceremony

47. Match the following:

| List-I (Post-Independence Education Commission Policy) | List-II (Year) |
| --- | --- |
| a) University Education Commission | i) 1952 – 53 |
| b) Secondary Education Commission | ii) 1964 – 66 |
| c) Indian Education Commission | iii) 1948 – 49 |
| d) First National Policy on Education | iv) 1968 |

Codes:

(1) a – iv, b – ii, c – i, d – iii

(2) a – ii, b – i, c – iv, d – iii

(3) a – iv, b – iii, c – ii, d – i

(4) a – iii, b – i, c – ii, d – iv

SPACE FOR ROUGH WORK

www.prepp.in

Prepp
Your Personal Exams Guide

48. ಕೆಳಗಿನ ಸರ್ಕಾರದಿಂದ ಸ್ಥಾಪಿತವಾದ ಸಂಶೋಧನಾ ಸಂಸ್ಥೆಗಳನ್ನು (ಪಟ್ಟಿ-I) ಅವುಗಳ ಕಾರ್ಯದೊಂದಿಗೆ (ಪಟ್ಟಿ-II) ಹೊಂದಿಸಿರಿ:

| ಪಟ್ಟಿ - I | ಪಟ್ಟಿ - II |
|---|---|
| a) ಅಟಲ್ ಇನ್ನೋವೇಶನ್ ಮಿಷನ್ | i) ಎಲೆಕ್ಟ್ರಾನಿಕ್ಸ್ ಮತ್ತು ಔಷಧಿಗಳ ಸಂಶೋಧನೆ ಮತ್ತು ಉತ್ಪಾದನೆಯನ್ನು ಪ್ರೋತ್ಸಾಹಿಸುವುದು. |
| b) ರಾಷ್ಟ್ರೀಯ ಸಂಶೋಧನಾ ಪ್ರತಿಷ್ಠಾನ | ii) ಅನ್ವೇಷಣೆ ಮತ್ತು ಉದ್ಯಮಶೀಲತೆಯ ಚೈತನ್ಯವನ್ನು ಪ್ರೋತ್ಸಾಹಿಸುವುದು. |
| c) ಇಂಪ್ರಿಂಟ್ ಮತ್ತು ಬಾಹ್ಯಾಕಾಶ ಯೋಜನೆ | iii) ಸಂಶೋಧನಾ ಮೂಲಭೂತ ಸೌಕರ್ಯಗಳನ್ನು ಬಲಪಡಿಸುವುದು ಮತ್ತು ಸಹಭಾಗಿತ್ವದ ಪ್ರಯತ್ನಗಳನ್ನು ಪ್ರೋತ್ಸಾಹಿಸುವುದು. |
| d) ಉತ್ಪಾದನೆ ಆಧಾರಿತ ಪ್ರೋತ್ಸಾಹಕ (PLI ಯೋಜನೆಗಳು) | iv) ರಾಷ್ಟ್ರೀಯ ಸವಾಲುಗಳಿಗೆ ಪರಿಹಾರ ನೀಡುವ ಸಂಶೋಧನೆ ಮತ್ತು ಭಾರತೀಯ ಹಾಗೂ ಜಾಗತಿಕ ಸಂಸ್ಥೆಗಳ ನಡುವೆ ಸಹಭಾಗಿತ್ವದ ಸಂಶೋಧನೆಯನ್ನು ಉತ್ತೇಜಿಸುವುದು. |

ಸಂಕೇತಗಳು :

(1) a – ii, b – iii, c – iv, d – i

(2) a – iii, b – iv, c – i, d – ii

(3) a – iv, b – i, c – ii, d – iii

(4) a – i, b – ii, c – iv, d – iii

49. ಗುಣಮಟ್ಟದ ಮಾನದಂಡಗಳನ್ನು ಖಾತ್ರಿಪಡಿಸಲು ತಾಂತ್ರಿಕ ಕಾರ್ಯಕ್ರಮಗಳನ್ನು ಮೌಲ್ಯೀಕರಿಸುವ ಮತ್ತು ಮಾನ್ಯತೆ ನೀಡುವ ಜವಾಬ್ದಾರಿಯನ್ನು ಹೊಂದಿರುವ ಮಂಡಳಿ ಯಾವುದು?

(1) ಎಐಸಿಟಿಇ (AICTE)

(2) ಎನ್‌ಐಟಿಗಳು (NITs)

(3) ಎನ್‌ಬಿಎ (NBA)

(4) ಯುಜಿಸಿ (UGC)

ಕಚ್ಚಾ ಕೆಲಸಕ್ಕೆ ಸ್ಥಳ

Prepp
Your Personal Exams Guide

48. Match the following government-established research organizations (List-I) with their functions (List-II):

| List-I | List-II |
|---|---|
| a) Atal Innovation Mission | i) Promotes research and manufacturing in electronics and pharmaceuticals |
| b) National Research Foundation | ii) Encourages innovation and entrepreneurial spirit |
| c) Imprint and Space Programme | iii) Strengthens research infrastructure and promotes collaborative efforts |
| d) Production linked Incentive (PLI Scheme) | iv) Research addressing national challenges and promoting collaborative research between Indian and global institutions |

Codes:

(1) a – ii, b – iii, c – iv, d – i

(2) a – iii, b – iv, c – i, d – ii

(3) a – iv, b – i, c – ii, d – iii

(4) a – i, b – ii, c – iv, d – iii

49. The board which is responsible for assessing and accrediting technical programs to ensure quality standards is

(1) AICTE

(2) NITs

(3) NBA

(4) UGC

SPACE FOR ROUGH WORK

Prepp
Your Personal Exams Guide

50. ಮೌಲ್ಯಯುತ ಶಿಕ್ಷಣದ ಪ್ರಮುಖ ಅಂಶಗಳು :

a) ಚಾರಿತ್ರ್ಯ ನಿರ್ಮಾಣ

b) ಮನೋಜನ್ಯ ಚಲನೆಯ (ಸೈಕೊಮೋಟಾರ್) ಅಭಿವೃದ್ಧಿ

c) ನೈತಿಕ ನಿರ್ಣಯ ತೆಗೆದುಕೊಳ್ಳುವಿಕೆ

d) ಜ್ಞಾನಾತ್ಮಕ ಅಭಿವೃದ್ಧಿ

e) ರಾಷ್ಟ್ರಪ್ರೇಮ ಮತ್ತು ಜಾಗತಿಕ ಪೌರತ್ವ

ಸರಿಯಾದುದನ್ನು ಆಯ್ಕೆ ಮಾಡಿರಿ.

(1) a, c ಮತ್ತು e

(2) b, c ಮತ್ತು d

(3) c, d ಮತ್ತು e

(4) e, b ಮತ್ತು a

Prepp Your Personal Exam Guide

ಕಚ್ಚಾ ಕೆಲಸಕ್ಕೆ ಸ್ಥಳ

www.prepp.in

Prepp
Your Personal Exams Guide

**50.** **The key aspects of Value Education are:**

**a) Character building**

**b) Psychomotor development**

**c) Ethical decision-making**

**d) Cognitive development**

**e) Patriotism and global citizenship**

**Choose the correct option:**

**(1) a, c and e** **(2) b, c and d**

**(3) c, d and e** **(4) e, b and a**

---

**SPACE FOR ROUGH WORK**

ಕಚ್ಚಾ ಕೆಲಸಕ್ಕೆ ಸ್ಥಳ